# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜೂನ್ 05, 2022

ಸಂಪುಟ : 49 ಸಂಚಿಕೆ : 22 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ

### ಕಸಾಪ ಕಾರ್ಯಕ್ರಮದಲ್ಲಿ ಲೋಕೇಶ್ ಒಡೆಯರ್

ದಾವಣಗೆರೆ, ಜೂ. 4- ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗುವ ಮೂಲಕ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ಸಂಸ್ಥಾನದಲ್ಲಿ ಮಾಡುವ ಮೂಲಕ 'ಮಾದರಿ ಮೈಸೂರ'ನ್ನಾಗಿ ಮಾಡಿದ ಕೀರ್ತಿಗೆ ಪಾತ್ರರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಾತ:ಸ್ಮರಣೀಯರು ಎಂದು ಸಾಹಿತಿಗಳೂ, ವಿಶ್ರಾಂತ ಪ್ರಾಚಾರ್ಯರಾದ ಡಾ. ನಾ. ಲೋಕೇಶ್ ಒಡೆಯರ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನ ದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆ ಹಾಗೂ 'ಕನ್ನಡ ನುಡಿ ಹಬ್ಬ' ದ ಸಾಂಸ್ಕೃತಿಕ, ಕಲಾ ತಂಡದವರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಜನೋಪಯೋಗಿ ಮತ್ತು ಪ್ರಗತಿಪರ ಕೆಲಸಗಳನ್ನು ಮಾಡುವ ಮೂಲಕ ಮಾದರಿ ಸಂಸ್ಥಾನವನ್ನಾಗಿ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು ಎಂದರು.

ಸಮಾಜದಲ್ಲಿನ (2ನೇ ಪುಟಕ್ಕೆ)

## ತಾ.ಪಂ-ಜಿ.ಪಂ ಚುನಾವಣೆಗೆ ಸಿದ್ಧರಾಗಿ

### ಜಗಳೂರು: ಬಿಜೆಪಿ ಮಂಡಲ ಕಾರ್ಯಕಾರಿಣಿ ಸಭೆಯಲ್ಲಿ ಶಾಸಕ ಎಸ್.ವಿ.ರಾಮಚಂದ್ರ ಕರೆ

ಜಗಳೂರು, ಜೂ.4- ಶೀಘ್ರವೇ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆಗಳು ನಡೆಯಲಿದ್ದು ಕ್ಷೇತ್ರದಲ್ಲಿ ಬಿಜೆಪಿ ಪಕ್ಷ ವಿಜೃಂಭಿಸಬೇಕು. ಪಕ್ಷದ ಗೆಲುವು ಮುಂಬರುವ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ದಿಕ್ಸೂಚಿಯಾಗಬೇಕು ಎಂದು ಶಾಸಕ ಎಸ್.ವಿ.ರಾಮಚಂದ್ರ ಕರೆ ನೀಡಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಇಂದು ನಡೆದ ಬಿಜೆಪಿ ಮಂಡಲ ಕಾರ್ಯಕಾರಿಣಿ ಉದ್ಘಾಟಿಸಿ ಅವರು ಮಾತನಾಡಿದರು.


ಮೂರು ಬಾರಿ ನನ್ನನ್ನು ಶಾಸಕನನ್ನಾಗಿ ಆಯ್ಕೆ ಮಾಡಿದ ಜಗಳೂರು ಕ್ಷೇತ್ರದಲ್ಲಿ ಬಿಜೆಪಿ ಪಕ್ಷ ಸಶಕ್ತವಾಗಿದೆ.ಕೇಂದ್ರ ಮತ್ತು ರಾಜ್ಯಕ್ಕೆ ಬಿಜೆಪಿ ಪಕ್ಷದ ಸಾಧನೆಗಳನ್ನು ಮನೆ ಬಾಗಿಲಿಗೆ ತಲುಪಿಸಬೇಕು. ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಭಿನ್ನಾಭಿಪ್ರಾಯ ಮರೆತು, ಮುಂಬರುವ ಚುನಾವಣೆಯ ಗೆಲುವಿಗೆ ಸಂಕಲ್ಪ ಮಾಡಬೇಕು ಎಂದರು.

ಕೇಂದ್ರ ಮತ್ತು ರಾಜ್ಯ ಆಡಳಿತಾರೂಢ ಬಿಜೆಪಿ ಸರ್ಕಾರದ ಫಲವಾಗಿ ವಿಧಾನ ಸಭಾ ಕ್ಷೇತ್ರದಲ್ಲಿ ಸಿಸಿ ರಸ್ತೆ, (2ನೇ ಪುಟಕ್ಕೆ)

## ನಮ್ಮದು ಬಸವ ಪಥ

### ಪಠ್ಯದಲ್ಲಿ ವ್ಯತ್ಯಾಸವಿದ್ದರೆ ಪರಿಷ್ಕರಣೆ

ಬೆಂಗಳೂರು, ಜೂ.4 - ನಮ್ಮದು ಬಸವ ಪಥದ ಸರ್ಕಾರ. ಪಠ್ಯ ಪರಿಷ್ಕರಣೆಯಲ್ಲಿ ಏನಾದರೂ ವ್ಯತ್ಯಾಸವಿದ್ದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿ, ವಾಸ್ತವಾಂಶದ ಆಧಾರದ ಮೇಲೆ ಪರಿಷ್ಕರಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಠ್ಯಪುಸ್ತಕ ಸಮಿತಿಯ ಕೆಲಸ ಪೂರ್ಣಗೊಂಡಿದ್ದರಿಂದ ಸಮಿತಿಯನ್ನು ವಿಸರ್ಜನೆಗೊಳಿಸಲಾಗಿದೆ ಎಂದರು.

ಪರಿಷ್ಕೃತ ಪಠ್ಯದ ಬಗ್ಗೆ ಹಲವಾರು ಸ್ವಾಮೀಜಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಿದ್ದು, ಅವುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ನಮ್ಮದು ಬಸವ ಪಥ ಸರ್ಕಾರ. ಬಸವಣ್ಣನವರ ಉತ್ತಮ ವಚನಗಳಿದ್ದು, ಅವುಗಳನ್ನು ಪರಿಶೀಲಿಸಿದ್ದೇನೆ. (3ನೇ ಪುಟಕ್ಕೆ)

## ಪಠ್ಯ ಪರಿಷ್ಕರಣೆ ಗೊಂದಲ ನಿವಾರಣೆಗೆ ಶರಣರ ಆಗ್ರಹ

ಚಿತ್ರದುರ್ಗ, ಜೂ. 4- ಸತ್ಪುರುಷರ ಇತಿಹಾಸವನ್ನು ವಾಸ್ತವಿಕತೆಯ ತಳಹದಿಯ ಮೇಲೆ ಪ್ರತಿಪಾದಿಸಬೇಕಾಗುತ್ತದೆ ಎಂದು ಚಿತ್ರದುರ್ಗ ಮುರುಘಾಮಠದ ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದ್ದಾರೆ.



ಆ ದಿಸೆಯಲ್ಲಿ ಇಲ್ಲಿಯವರೆಗೂ ಪ್ರತಿಪಾದಿಸಿಕೊಂಡು ಬಂದಂತಹ ಇತಿಹಾಸವನ್ನೇ ಮುಂದುವರಿಸಬೇಕಾಗುತ್ತದೆ. ಸಮಾಜ ಸುಧಾರಕ ಬಸವಣ್ಣನವರ ಚರಿತ್ರೆಗೆ ಸಂಬಂಧಿಸಿದಂತಹ ವಿಚಾರಗಳಲ್ಲಿ ಗೊಂದಲ ಉಂಟಾಗಿದೆ. ಆ ಗೊಂದಲವನ್ನು ಕೂಡಲೇ ನಿವಾರಿಸಬೇಕಾಗುತ್ತದೆ. ಯಾವುದೇ ಇತಿಹಾಸವನ್ನು (3ನೇ ಪುಟಕ್ಕೆ)

## ಬಿಜೆಪಿಯಲ್ಲಿ ಭಿನ್ನಮತೀಯರ ಭೀತಿ

### ಅಡ್ಡ ಮತದಾನ ತಡೆಯಲು ವರಿಷ್ಠರ ಪ್ರವೇಶ

ಬೆಂಗಳೂರು, ಜೂ. 4 - ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಗೂ ಅಡ್ಡ ಮತದಾನದ ಭೀತಿ ಎದುರಾಗಿದೆ.

ಪಕ್ಷದ ಕೆಲವು ನಾಯಕರಲ್ಲಿ ಇರುವ ಭಿನ್ನಾಭಿಪ್ರಾಯ ರಾಜ್ಯಸಭಾ ಚುನಾವಣೆಯಲ್ಲಿ ಸ್ಫೋಟಗೊಳ್ಳಬಹುದೆಂಬ ಮಾಹಿತಿಯ ಆಧಾರದ ಮೇಲೆ ವರಿಷ್ಠರು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಅವರನ್ನು ಹಠಾತ್ ಆಗಿ ನಗರಕ್ಕೆ ಕಳುಹಿಸಿದ್ದಾರೆ.

ಅವರು ತಡರಾತ್ರಿ ಧಾವಿಸಿ, ನಾಳೆ ಇಡೀ ದಿನ ಪಕ್ಷದ ಕಚೇರಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಮುಖಂಡರೊಟ್ಟಿಗೆ ಸಮಾಲೋಚನೆ ನಡೆಸಿ, ವರಿಷ್ಠರ ಸಂದೇಶ ರವಾನೆ ಮಾಡಲಿದ್ದಾರೆ.

ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ವಿಜಯೇಂದ್ರ ಅವರಿಗೆ ಅವಕಾಶ ದೊರೆಯದಿರುವುದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬೆಂಬಲಿಗರ ಸಿಟ್ಟಿಗೆ ಕಾರಣವಾಗಿದೆ.

ಇದೇ ಕಾರಣಕ್ಕೆ ಯಡಿಯೂರಪ್ಪ ಶಿಕ್ಷಕರು ಮತ್ತು ಪದವೀಧರ ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ತಮ್ಮನ್ನು ಸಕ್ರಿಯವಾಗಿ (2ನೇ ಪುಟಕ್ಕೆ)





## ಜನ್ಮದಿನದ ಶುಭಾಶಯಗಳು



### ಶರಣ ವೈ. ವಸಂತಪ್ಪನವರು

ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ನಿವೃತ್ತ ಮುಖ್ಯೋಪಾಧ್ಯಾಯರು

04.06.2022 ರಂದು ಜನ್ಮದಿನವನ್ನು ಆಚರಿಸಿಕೊಂಡಿರುವ ಇವರು 80 ವಸಂತಗಳು ತುಂಬಿ, 81ನೇ ವಸಂತಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಇವರಿಗೆ ಭಗವಂತನು ಆಯುರಾರೋಗ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

- ಶ್ರೀಮತಿ ಪಾರ್ವತಮ್ಮ ಶ್ರೀ ವೈ. ರಾಮಚಂದ್ರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆ, ಅಳಿಯಂದಿರು
- ಶ್ರೀಮತಿ ಶಾರದ ಲಿಂ|| ವೈ. ವಾಮದೇವಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆ, ಅಳಿಯಂದಿರು
- ಲಿಂ|| ವೈ.ವಿ. ಶಾರದ ವಸಂತಪ್ಪ ಮತ್ತು ಮಕ್ಕಳು, ಸೊಸೆ, ಅಳಿಯಂದಿರು
- ಶ್ರೀಮತಿ ನಿರ್ಮಲ ಮತ್ತು ಶ್ರೀ ವೈ. ವೃಷಭೇಂದ್ರಪ್ಪ ಮತ್ತು ಮಕ್ಕಳು ಹಾಗೂ ಅಳಿಯಂದಿರು
- ಲಿಂ|| ವೈ. ಸುಶೀಲಮ್ಮ, ಶ್ರೀ ಹೆಚ್. ಚನ್ನಬಸಪ್ಪ ಮತ್ತು ಮಕ್ಕಳು, ಸೊಸೆ, ಅಳಿಯಂದಿರು
- ಶ್ರೀಮತಿ ವೈ. ಲಲಿತ ಮತ್ತು ಶ್ರೀ ಎನ್. ರೇವಣಸಿದ್ಧಪ್ಪ ಮತ್ತು ಮಕ್ಕಳು, ಸೊಸೆಯಂದಿರು

- ಮಕ್ಕಳಾದ : ಶ್ರೀಮತಿ ಡಾ|| ವನಿತ ಬಿ.ಟಿ. ಡಾ|| ವೈ.ವಿ. ಶ್ರೀನಿವಾಸ್
- ಶ್ರೀಮತಿ ವೈ.ವಿ. ಸುಜಾತ ಶ್ರೀ ಸುರೇಶ್ ಎ. ಎಸ್.
- ಶ್ರೀಮತಿ ವೈ.ವಿ. ಸುನೀತ, ಶ್ರೀರಾಜೇಶ್ ಎಸ್. ಅಕ್ಕಿಹಾಳ್

- ಮೊಮ್ಮಕ್ಕಳಾದ : ಚಿ|| ವೈ.ಎಸ್. ಸಮರ್ಥ್, ಚಿ|| ವೈ.ಎಸ್. ಚಿನ್ಮಯಿ, ಚಿ|| ಎಸ್.ಎ. ಶಶಾಂಕ ಚಿ|| ಎಸ್.ಎ. ಹೇಮಂತ್, ಕು|| ರೋಹಿಣಿ ಆರ್. ಅಕ್ಕಿಹಾಳ್, ಚಿ|| ಗಣೇಶ್ ಆರ್. ಅಕ್ಕಿಹಾಳ್

- ಲಿಂ|| ಶ್ರೀಮತಿ ಗೌರಮ್ಮ, ಲಿಂ|| ಕೆ. ಬಸವಂತಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಅರಸನಘಟ್ಟ, ಹೊಳಲ್ಕೆರೆ ತಾಲ್ಲೂಕು
- ಶ್ರೀಮತಿ ಕಮಲಮ್ಮ ಲಿಂ|| ಶ್ರೀ ಬಿ.ಆರ್. ತಮ್ಮಣ್ಣಪ್ಪ, ನಿವೃತ್ತ ಡಿಸಿಎಫ್ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆ, ಅಳಿಯಂದಿರು ಹಾಗೂ ಬಾರೇರ ವಂಶಸ್ಥರು, ಹೊಸ ದೂಪದಹಳ್ಳಿ, ಶಿಕಾರಿಪುರ ತಾಲ್ಲೂಕು
- ಯಲವಟ್ಟಿ ವಂಶಸ್ಥರು ಶ್ಯಾಬನೂರು, ಶಿರಮಗೊಂಡನಹಳ್ಳಿ ಹಾಗೂ ಬಂಧು-ಮಿತ್ರರು

SRISHYLA EDUCATIONAL TRUST (R)

## GM HALAMMA PU COLLEGE, DAVANAGERE

GMIT Campus, P.B.Road, Davanagere-577 006



### ADMISSION OPEN

- Programme 1: PUC(PCMB) + NEET + K-CET / PUC(PCMCs) + JEE + K-CET
- Programme 2: PUC(PCMCs) + K-CET
- Programme 3: PUC(EBAS/ EBACs) + CA

NEET/JEE/K-CET ನಲ್ಲಿ ಶೇ.100% ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.



### ಕಾಲೇಜಿನ ವೈಶಿಷ್ಟ್ಯತೆಗಳು

- 54 ಎಕರೆ ವಿಸ್ತಾರವಾದ ಆವರಣದಲ್ಲಿ ಕಾಲೇಜು
- ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ
- ಸುಸಜ್ಜಿತ ಹಾಗೂ ವ್ಯವಸ್ಥಿತವಾದ ಪ್ರಯೋಗಾಲಯಗಳು
- ದಾವಣಗೆರೆ ಹಾಗೂ ಹರಿಹರದಿಂದ ಉಚಿತ ಬಸ್ ಸೌಲಭ್ಯ
- ಪ್ರತಿ ತಿಂಗಳು ಪೋಷಕರು ಹಾಗೂ ಉಪನ್ಯಾಸಕರೊಂದಿಗೆ ಸಭೆ
- 24 ಗಂಟೆಗಳ ಸಾರಿಗೆ ಮತ್ತು ವೈದ್ಯಕೀಯ ತುರ್ತು ಚಿಕಿತ್ಸೆಯ ವ್ಯವಸ್ಥೆ
- ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಹ್ಯಾಂಡ್‌ಬಾಲ್ ಕ್ರೀಡೆಯಲ್ಲಿ ಪ್ರಥಮ ಬಹುಮಾನ
- ಎಂಪವರ್ಡ್‌ಮೈಂಡ್ಸ್ ಸಂಸ್ಥೆಯಿಂದ ಅತ್ಯುತ್ತಮ ಕಾಲೇಜು ಪ್ರಶಸ್ತಿ
- ಸಾಧಕ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸೂಕ್ತ ಪುರಸ್ಕಾರ ಪ್ರಶಸ್ತಿ

E-mail: principal@gmhpuc.ac.in Website: www.gmhpuc.ac.in

Contact: 91411 58731, 91411 58732, 99722 11111.

Y.U. Subhash Chandra
Management Representative
M: 94480 55479

G.M. Lingaraju
Chairman

# ಗುಣಮಟ್ಟದ ಉತ್ಪನ್ನದಿಂದ ರೈತರಿಗೆ ಉತ್ತಮ ಮಾರುಕಟ್ಟೆ



ಕಾಶಿಪುರ ಕ್ಯಾಂಪ್‌ನ ಕಾರ್ಯಕ್ರಮದಲ್ಲಿ ಹರಳಕಟ್ಟದ ತರಳಬಾಳು ಶಾಖಾಮಠದ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ

ಚನ್ನಗಿರಿ, ಜೂ. 4- ರೈತರಿಗೆ ಉತ್ತಮ ಮತ್ತು ಪ್ರಾಮಾಣಿಕ ಸೇವೆ ಒದಗಿಸುವ ಮೂಲಕ ವ್ಯವಹಾರ ಮಾಡಬೇಕಿದೆ. ಪ್ರಸ್ತುತ ದಿನಗಳಲ್ಲಿ ಬ್ರಾಂಡ್ ನೇಮ್ ಹುಟ್ಟುಹಾಕದಿದ್ದರೆ ವಾಣಿಜ್ಯೀಕರಣಗೊಳಿಸುವುದು ತುಂಬಾ ಕಷ್ಟ ಎಂದು ಹರಳಕಟ್ಟದ ತರಳಬಾಳು ಶಾಖಾಮಠದ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಯುವ ಉದ್ಯಮಿಗಳಿಗೆ ಕಿವಿಮಾತು ಹೇಳಿದರು.

ಚನ್ನಗಿರಿ ತಾಲ್ಲೂಕಿನ ಕಾಶೀಪುರ ಕ್ಯಾಂಪ್‌ನಲ್ಲಿ ಶುಕ್ರವಾರ ಜಿಂಗಾಡೆ ರೈಸ್ ಇಂಡಸ್ಟ್ರೀಸ್ (ಪೂರ್ಣಿಮಾ ರೈಸ್ ಇಂಡಸ್ಟ್ರೀಸ್) ಉದ್ಘಾಟನೆ, ಪೂರ್ಣಿಮಾ ಅಕ್ಕಿ ಗಿರಣಿಗೆ ಭೂಮಿ ಪೂಜೆ ನೆರವೇರಿಸಿ, ನಂತರ ನಡೆದ ಶ್ರೀಮತಿ ಮೀನಾಕ್ಷಿ ರಾಮಪ್ರಭು ಅವರ ಷಷ್ಟ್ಯಾಬ್ಧಿ, ಜಿ.ರಾಮಪ್ರಭು ಅವರ ವಜ್ರ ಮಹೋತ್ಸವ ಮತ್ತು ಸಿರಿಗೆರೆಯ ಎಂಬಿಆರ್ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ರಾಮಪ್ರಭು ಅವರಿಗೆ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ರೈಸ್ ಮಿಲ್ ಉಳಿಸಿ, ಬೆಳೆಸಿ. ಮುಂದಿನ 15-20 ವರ್ಷಗಳಲ್ಲಿ ಈಗಿನ ರೈಸ್ ಮಿಲ್ ಹಳೆಯದಾಗಿ ನಿರುಪಯುಕ್ತವಾದುದಾಗುತ್ತದೆ. ಆಗ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲು ನಿಮಗೆ ಸಾಮರ್ಥ್ಯ ಇರಬೇಕು. ಆಗ ಮತ್ತೆ ಸಾಲ ಮಾಡುವುದು, ಮಕ್ಕಳಿಗೂ, ಮೊಮ್ಮಕ್ಕಳಿಗೂ ಸಾಲ ಹೊರಿಸಿಹೋಗುವ ಕೆಲಸ ಆಗಬಾರದು ಎಂದು ಎಚ್ಚರಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಮಾತನಾಡಿ, ಸಮಾಜಮುಖಿ ಚಿಂತನೆಯ ರಾಮಪ್ರಭು ಅವರು ಯುವ ಉದ್ಯಮಿಗಳಾದ ಪುತ್ರರ ಮೂಲಕ ರೈತ ಸ್ನೇಹಿಯಾದ ಅಕ್ಕಿ ಗಿರಣಿಗೆ ಭೂಮಿ ಪೂಜೆ ಮಾಡಿದ್ದಾರೆ. ಜತೆಗೆ, ಪ್ರಸ್ತುತ ಅನಿಶ್ಚಿತ ಮಳೆಗಾಲದ ಸಂದರ್ಭಕ್ಕೆ ಭತ್ತ ಕಟಾವಿನ ನಂತರ ಒಣಗಿಸುವುದು ಕಷ್ಟದ ಪರಿಸ್ಥಿತಿ ಇದೆ. ಇದಕ್ಕೆ ಡ್ರೈಯರ್ ಅಗತ್ಯವಿತ್ತು. ಅದನ್ನೂ ಬೃಹತ್ ಪ್ರಮಾಣದಲ್ಲಿ ನಿರ್ಮಿಸಿದ್ದಾರೆ. ಇದು ಕೃಷಿ ವಲಯಕ್ಕೆ ಅನುಕೂಲ ಆಗಲಿದೆ ಎಂದು ಅಭಿಪ್ರಾಯಪಟ್ಟರು.

ಸಿರಿಗೆರೆಯ ಎಂಬಿಆರ್ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಜಿ. ರಾಮಪ್ರಭು ಶ್ರೀಮತಿ ಮೀನಾಕ್ಷಿ ದಂಪತಿಯನ್ನು ಸನ್ಮಾನಿಸಿ, ಬೆಳ್ಳಿ ಗದೆ ಕಾಣಿಕೆ ನೀಡಿ ಗೌರವಿಸಿ, ಅಭಿನಂದನಾ ನುಡಿಗಳನ್ನಾಡಿದರು.

ಜಿ.ರಾಮಪ್ರಭು ಅವರು ಗುರುವಂದನೆ ಸ್ವೀಕರಿಸಿ ಮಾತನಾಡಿದರು.

ಶಾಸಕ ಮಾಡಾಳು ವಿರೂಪಾಕ್ಷಪ್ಪ ಅವರ ಪುತ್ರ ಮಾಡಾಳು ಮಲ್ಲಿಕಾರ್ಜುನ್, ದಾವಣಗೆರೆಯ ಲೆಕ್ಕ ಪರಿಶೋಧಕ ಅಂಬರ್‌ಕರ್ ವಿರೂಪಣ್ಣ, ಬೆಂಗಳೂರಿನ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯಾಧ್ಯಕ್ಷ ಸಾವಿತ್ರಿ ಪುರುಷೋತ್ತಮ್, ನಿವೃತ್ತ ಉಪನ್ಯಾಸಕ ಎಸ್.ಬಿ.ಬಸವರಾಜಪ್ಪ, ಕೋಗುಂಡೆ ಬಸವರಾಜಪ್ಪ, ದಾಗಿನಕಟ್ಟೆ ನಾಗರಾಜ್, ಎಂ.ಸಿ.ಜಯಪ್ಪ ಹಾಗೂ ಇತರರು ಇದ್ದರು.

# ತರಳಬಾಳು ಶ್ರೀಗಳ ಸಾನ್ನಿಧ್ಯದಲ್ಲಿ ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ



**ನಗರದಲ್ಲಿ ಇಂದು**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕಕ್ಕೆ ಆಯ್ಕೆಯಾದ ಇ.ಎಂ. ಮಂಜುನಾಥ ಮತ್ತು ಅವರ ತಂಡದ ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಬಿಐಇಟಿ ಕಾಲೇಜು ಆವರಣದಲ್ಲಿರುವ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ತರಳಬಾಳು ಬೃಹನ್ಮಠದ ಜಗದ್ಗುರು ಡಾ.ಶಿವ ಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸುವರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ ನೂತನ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಲಿದ್ದಾರೆ.

ಜನತಾವಾಣಿ ಸಂಪಾದಕ ಎಂ.ಎಸ್. ವಿಕಾಸ್ ಅವರು ದಿ. ಶ್ರೀ ಡಿ.ವಿ. ಗುಂಡಪ್ಪ, ದಿ. ಶ್ರೀ ಹೆಚ್.ಎನ್. ಷಡಾಕ್ಷರಪ್ಪ, ದಿ. ಶ್ರೀ ಸಿ.ಕೇಶವಮೂರ್ತಿ ಇವರ ಭಾವಚಿತ್ರಗಳಿಗೆ ಪುಷ್ಪ ನಮನ ಅರ್ಪಿಸಲಿದ್ದಾರೆ.

ಕಾನಿಪ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ.

ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಕೆ.ಚಂದ್ರಣ್ಣ ಹಿರಿಯ ಪತ್ರಕರ್ತರಿಗೆ ಗೌರವ ಸಮರ್ಪಣೆ ಸಲ್ಲಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಿ.ಅಶೋಕ್ ಕುಮಾರ್, ಸಹಾಯಕ ನಿರ್ದೇಶಕ ಬಿ. ಧನಂಜಯಪ್ಪ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ನಗರವಾಣಿ ಸಹ ಸಂಪಾದಕ ಬಿ. ಎನ್. ಮಲ್ಲೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಚುನಾವಣಾಧಿಕಾರಿ ಎಂ.ಎಸ್. ಶಿವಶರಣಪ್ಪ, ಉಪ ಚುನಾವಣಾಧಿಕಾರಿ ಎ.ಆರ್. ಉಜ್ಜನಪ್ಪ, ಸಹಾಯಕ ಚುನಾವಣಾಧಿಕಾರಿ ಸಿ.ಗಿರೀಶ್ ಅವರುಗಳಿಗೆ ಗೌರವ ಸತ್ಕಾರ ನಡೆಯಲಿದೆ.

# ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ

**(1ನೇ ಪುಟದಿಂದ)** ಅನಿಷ್ಟ ಪದ್ಧತಿಗಳಾದ ದೇವದಾಸಿ, ಬಸವಿ ಪದ್ಧತಿಯನ್ನು ರದ್ದು ಮಾಡಿದರು. ತಂಬಾಕು ನಿಷೇಧ ಮಾಡುವುದಲ್ಲದೇ, ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆಯನ್ನು ಜಾರಿಗೆ ತಂದರು. ವಿಧವೆಯರಿಗೆ ಮರು ವಿವಾಹ ಮಾಡುವ ಕಾಯ್ದೆಯನ್ನು ಜಾರಿಗೊಳಿಸಿದರು. ಅವಕಾಶ ವಂಚಿತರಿಗೆ ಶಿಕ್ಷಣ ನೀಡಿದರು. ಮೊಟ್ಟಮೊದಲಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಜಾರಿಗೆ ತಂದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸಲ್ಲುತ್ತದೆ ಎಂದು ತಿಳಿಸಿದರು.

1907 ರಲ್ಲಿ ಹಿರಿಯೂರು ಬಳಿ 'ವಾಣಿ ವಿಲಾಸ ಸಾಗರ' (ಮಾರಿ ಕಣಿವೆ) ನಿರ್ಮಿಸಿದರು. 1911 ರಲ್ಲಿ ಕಟ್ಟಲಾದ ಕೃಷ್ಣರಾಜ ಸಾಗರ ಅಣೆಕಟ್ಟು (ಕನ್ನಂಬಾಡಿ ಕಟ್ಟೆ) ಭಾರತದ ಮೊಟ್ಟ ಮೊದಲ ಬೃಹತ್ ಜಲಾಶಯವಾಗಿದೆ. ಇವೆರಡೂ ಜಲಾಶಯಗಳು ರೈತರ ಜೀವನಾಡಿಗಳು ಎಂದರು.

ದಾವಣಗೆರೆ ವಿವಿ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಪಿ. ನಾಗಭೂಷಣಗೌಡ ಅವರು 'ನಾಲ್ವಡಿ ಕೃಷ್ಣರಾಜ ಒಡೆಯರವರು ನಾಡಿಗೆ ಕೊಟ್ಟ ಕೊಡುಗೆಗಳು' ಕುರಿತು ಮಾತನಾಡಿ, ಸೌಂದರ್ಯದ ರಾಜ್ಯವನ್ನಾಗಿ ಮೈಸೂರನ್ನು ಅಭಿವೃದ್ಧಿಪಡಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರ್. ರಾಜನ ಮತ್ತು ಋಷಿಯ ಗುಣಗಳಿರುವ ಕಾರಣಕ್ಕಾಗಿ ಅವರಿಗೆ ರಾಜರ್ಷಿ ಎಂಬ ಬಿರುದು ಬಂದಿದೆ. ಮೈಸೂರಿನ ಪ್ರತಿಯೊಬ್ಬ ನಾಗರಿಕರೂ ಸಹ ರಾಜರ ಬಗ್ಗೆ ಅತ್ಯಂತ ಗೌರವದ ಭಾವನೆಯನ್ನು ತೋರುತ್ತಾರೆ ಎಂದರು.

ಭೌತಿಕವಾಗಿ ಶ್ರೀಮಂತಗೊಳಿಸಲು ಕೃಷ್ಣರಾಜಸಾಗರ ಅಣೆಕಟ್ಟು ಕಟ್ಟಿದರು, ಜ್ಞಾನಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಸ್ವಾಭಿಮಾನಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿಸುವ ಮೂಲಕ ಆಧುನಿಕ ಕರ್ನಾಟಕದ ನಿರ್ಮಾತೃ ಎನಿಸಿಕೊಂಡಿದ್ದಾರೆ ಎಂದು ಹೇಳಿದರು.

ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು, 1915 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪ್ರಾರಂಭಿಸಿದರು. ಗ್ರಾಮ ನೈರ್ಮಲೀಕರಣ, ಕಡ್ಡಾಯ ಶಿಕ್ಷಣ, ರೈಲು ಮಾರ್ಗಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಒಟ್ಟಾರೆ ಒಡೆಯರ್ ಇಡೀ ರಾಜ್ಯಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು ಎಂದರು.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪುಸ್ತಕ ಪ್ರಕಟಣೆಯ ಕೊರತೆ ಕಂಡು ಬಂದಿದ್ದು, ವರ್ಷಕ್ಕೆ ಒಂದು ಪುಸ್ತಕ ಹೊರ ತರುವ ಪ್ರಯತ್ನ ಮಾಡಬೇಕೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ರಾಜ್ಯದಲ್ಲಿ ಮೂರೂವರೆ ಲಕ್ಷ ಆಜೀವ ಸದಸ್ಯತ್ವ ಮಾಡಲಾಗಿದ್ದು, ಒಂದು ಕೋಟಿ ಸದಸ್ಯತ್ವದ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನ್ನಡ ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ದುಡಿದ ಮಹಾನ್ ಚೇತನ ಎಂದು ಬಣ್ಣಿಸಿದರು.

ಅವರ ಆಡಳಿತದ ಅವಧಿಯಲ್ಲಿ ಸಾಮಾಜಿಕ ಪರಿವರ್ತನೆ, ಕೈಗಾರಿಕೀಕರಣ, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ, ಆಡಳಿತ ವಿಕೇಂದ್ರೀಕರಣ, ರೈಲ್ವೆ, ನೀರಾವರಿ ಸೌಲಭ್ಯ, ಶಿಕ್ಷಣ, ವಾಣಿಜ್ಯ ಸೇರಿದಂತೆ ಹಲವಾರು ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುವ ಮೂಲಕ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಕನ್ನಡ ಸಾಹಿತ್ಯ ಪರಿಷತ್ ವಿಶೇಷವಾಗಿ ಆಚರಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಿದೆ ಎಂದು ವಾಮದೇವಪ್ಪ ತಿಳಿಸಿದರು.

ಇದೇ ವೇಳೆ ನುಡಿ ಹಬ್ಬದ ಸಂದರ್ಭದಲ್ಲಿ ಕ್ರಿಯಾಶೀಲ ತಂಡವಾಗಿ ಕಾರ್ಯನಿರ್ವಹಿಸಿದ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಸುಮತಿ ಜಯ್ಯಪ್ಪ ಅವರ ತಂಡವನ್ನು ಗೌರವಿಸಲಾಯಿತು. ಪ್ರಶಸ್ತಿಗೆ ಭಾಜನರಾದ ಕಲಾ ತಂಡಗಳನ್ನು ಸನ್ಮಾನಿಸಲಾಯಿತು.

ಎಸ್.ಎಂ. ಮಲ್ಲಮ್ಮ, ಯಶಾ ದಿನೇಶ್, ರೇಖಾ ಓಂಕಾರಪ್ಪ, ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ , ದಿಳ್ಳೆಪ್ಪ ಮತ್ತಿತರರು ಉಪಸ್ಥಿತರಿದ್ದರು.

ಯಶ ದಿನೇಶ್ ತಂಡದವರು ನಾಡಗೀತೆ ಹಾಡಿದರು. ಜಗದೀಶ ಕೂಲಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರೇವಣಸಿದ್ಧಪ್ಪ ಅಂಗಡಿ ಸ್ವಾಗತಿಸಿದರು. ರಾಘವೇಂದ್ರ ನಾಯರಿ ನಿರೂಪಿಸಿದರು.

# ಜಗಳೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ



ಜಗಳೂರು, ಜೂ. 4- ತಾಲ್ಲೂಕು ಆಡಳಿತದ ವತಿಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ತಹಶೀಲ್ದಾರ್ ಜಿ. ಸಂತೋಷ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಸಂಸ್ಥಾನದ ಆಡಳಿತಾವಧಿಯಲ್ಲಿ ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಿಸಿದ್ದು, ಇಂದಿಗೂ ಜೀವಂತ ಸಾಕ್ಷಿಯಾಗಿದೆ. ಅಲ್ಲದೇ ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿ ಶೈಕ್ಷಣಿಕ ಕ್ಷೇತ್ರಕ್ಕೆ ಒತ್ತು ನೀಡಿದರು. ದಲಿತ, ಹಿಂದುಳಿದ ವರ್ಗದ ಮಹಿಳೆಯರಿಗೆ ಸಮಾನತೆ ಕಲ್ಪಿಸಿದ ಧೀಮಂತ ನಾಯಕರಾಗಿದ್ದರು ಎಂದು ಸ್ಮರಿಸಿದರು.

ಉಪ ತಹಶೀಲ್ದಾರ್ ಮಂಜನಂದಾ, ರಾಮಚಂದ್ರಪ್ಪ, ರೂಪ, ಉಪನೋಂದ ಣಾಧಿಕಾರಿ ಮಂಜುನಾಥ್, ತೋಟಗಾರಿಕೆ ಇಲಾಖೆ ನಿರ್ದೇಶಕ ವೆಂಕಟೇಶಮೂರ್ತಿ, ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕ ಬಿ. ಮಹೇಶ್ವರಪ್ಪ, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ವೆಂಕಟೇಶಮೂರ್ತಿ, ಆರ್.ಐ. ಕುಬೇರನಾಯ್ಕ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

# ರೋಟರಿ : ನಗರದಲ್ಲಿ ಇಂದು ಸಸಿ ನೆಡುವ ಕಾರ್ಯಕ್ರಮ

ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ (ಆರ್‌ಐಡಿ 3160) ಇವುಗಳ ಸಂಯುಕ್ತಾಶ್ರಯದಲ್ಲಿ ಕೊಟ್ಯಾಕ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಲಿ.ನಡಿ ಸಸಿ ನೆಡುವ ಕಾರ್ಯಕ್ರಮ ಇಂದು ಹಮ್ಮಿಕೊಳ್ಳಲಾಗಿದೆ. ಡಾಲರ್ಸ್ ಕಾಲೋನಿಯಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಸಸಿ ನೆಡುವ ಕಾರ್ಯಕ್ರಮ ನೆರವೇರುವುದು. ಗೌರವಾನ್ವಿತ ಅತಿಥಿಗಳಾಗಿ ವೀರೇಶ್ ಎಸ್.ಟಿ. ಆಗಮಿಸುವರು. ಮುಖ್ಯ ಅತಿಥಿಗಳಾಗಿ ಬೆಳ್ಳಿಯಪ್ಪ, ಶರತ್‌ಚಂದ್ರ ಶೆಟ್ಟಿ ಆಗಮಿಸುವರು.

ಅಧ್ಯಕ್ಷತೆಯನ್ನು ಡಾ. ಎ.ಎಂ. ಶಿವಕುಮಾರ್, ಡಾ. ಸುಜಿತ್‌ಕುಮಾರ್ ಎಸ್.ಹೆಚ್. ವಹಿಸುವರು.

# ಜ್ಞಾನಾರ್ಜನೆ ಮಾಡಿಕೊಳ್ಳಲು ಉತ್ತಮ ಅವಕಾಶ: ಉಪ ತಹಶೀಲ್ದಾರ್ ರವಿ



ಮಲೇಬೆನ್ನೂರು, ಜೂ.4 - ಇಲ್ಲಿನ ನಾಡ ಕಚೇರಿ ಮುಂಭಾಗದಲ್ಲಿ ಉಪ ತಹಶೀಲ್ದಾರ್ ಆರ್.ರವಿ ಅವರು ದಲಿತ ವಿದ್ಯಾರ್ಥಿ ಪರಿಷತ್ತು ಏರ್ಪಡಿಸಿರುವ ಸ್ಪರ್ಧಾತ್ಮಕ ಪರೀಕ್ಷೆ ಕುರಿತು ಪೋಸ್ಟರ್ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಏರ್ಪಡಿಸಿರುವುದು ಜ್ಞಾನಾರ್ಜನೆ ಮಾಡಿಕೊಳ್ಳಲು ಉತ್ತಮ ಅವಕಾಶವಾಗಿದ್ದು, ವಿಜೇತರಿಗೆ ಬಹುಮಾನ ವಿತರಿಸುತ್ತಿರುವುದು ವಿದ್ಯಾರ್ಥಿಗಳು ಅಧ್ಯಯನ ಮಾಡಲು ಸಹಕಾರಿ ಆಗಲಿದೆ. 15 ವರ್ಷದಿಂದ ಮೇಲ್ಪಟ್ಟು 35 ವರ್ಷದ ಒಳಗಿನ ವಯಸ್ಸಿನವರು ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ತು ಜಿಲ್ಲಾ ಅಧ್ಯಕ್ಷರೂ ಆದ ಪುರಸಭೆ ಸದಸ್ಯ ಸಾಬೀರ್ ಅಲಿ ಜಯಸಿಂಹ, ಹರಳಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಓಬಳಾಪುರದ ಅಣ್ಣಪ್ಪ, ಗ್ರಾಮಲೆಕ್ಕಾಧಿಕಾರಿ ಆನಂದ್ ತೀರ್ಥ, ವಿಶೇಷ ಚೇತನರ ಸಂಘದ ಅಧ್ಯಕ್ಷ ಪಿ ಗಂಗಾಧರ್, ನಾಡ ಕಚೇರಿ ಸಿಬ್ಬಂದಿಗಳಾದ ಬಸವರಾಜ್ , ಪುಷ್ಪಾವತಿ ಹಿರೇಮಠ, ಆನಂದ್, ಮಾರುತಿ, ಮುಂತಾದವರು ಉಪಸ್ಥಿತರಿದ್ದರು.

# ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಪದಗ್ರಹಣ



ರಾಣೇಬೆನ್ನೂರು

ರಾಣೇಬೆನ್ನೂರು, ಜೂ. 4- ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಾಣೇಬೆನ್ನೂರು ತಾಲ್ಲೂಕು ಘಟಕದ ವಾರ್ಷಿಕ ಮಹಾಸಭೆ ಮತ್ತು ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವು ವಾಗೀಶ ನಗರದ ಕನಕದಾಸ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ರಾಜ್ಯ ಸಂಘದ ರಾಜ್ಯಪ್ರತಿನಿಧಿಗಳಾದ ನಾಗರಾಜ್ ನಲವಾಗಲ ಮಾತನಾಡಿದರು. ರಾಜ್ಯ ಪ್ರತಿನಿಧಿ ಮಲ್ಲಿಕಾರ್ಜುನ ಬಾವಿಕಟ್ಟಿ ಸಭೆಯಲ್ಲಿ ಹಾಜರಿದ್ದರು. ಸಭೆಯಲ್ಲಿ ತಾಲ್ಲೂಕು ಘಟಕದ ನೂತನ ಅಧ್ಯಕ್ಷರಾಗಿ ಎಸ್.ಹೆಚ್ ಪಾಟೀಲ್, ಗೌರವಾಧ್ಯಕ್ಷರಾಗಿ ಆರ್.ವಿ ಮಠದ, ಉಪಾಧ್ಯಕ್ಷರಾಗಿ ಎಸ್.ಕೆ ಪೊಲೀಸ್‌ಗೌಡ್ರು, ಕೋಶಾಧ್ಯಕ್ಷರಾಗಿ ಕಲ್ಲೇದೇವರು, ಸಂಘಟನಾ ಕಾರ್ಯದರ್ಶಿ ಬಸವರಾಜ ನಾಯಕ, ಸಂಘಟನಾ ಕಾರ್ಯದರ್ಶಿ ಹಾಲೇಶ್ ವಡತೇರ, ಸಂಚಾಲಕ ಬಿ.ವಿ. ಶಾಮನೂರು, ಖಜಾಂಚಿ ಶ್ರೀಮತಿ ಸುಧಾ.ಕೆ ಪದಗ್ರಹಣ ಮಾಡಿದರು.

# ನಗರದಲ್ಲಿ ಇಂದು ಪರಿಸರ ದಿನಾಚರಣೆ

ಎಸ್.ಎಸ್. ಬಡಾವಣೆ ನಾಗರಿಕರ ಸಮಿತಿ ಮತ್ತು ಪರಿಸರ ವೇದಿಕೆ ಹಾಗೂ ವಿಹ ವನಿತಾ ಪರಿಸರ ವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 5ಕ್ಕೆ ಎಸ್.ಎಸ್. ಬಡಾವಣೆ, 'ಎ' ಮತ್ತು 'ಬಿ' ಬ್ಲಾಕ್‌ನ ಮದ್ನಾಳ ಬಸವಣ್ಣನ ದೇವಸ್ಥಾನದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಲಿದೆ.

ಅಧ್ಯಕ್ಷತೆಯನ್ನು ಶಿವನಳ್ಳಿ ರಮೇಶ್ ವಹಿಸುವರು. ಶ್ರೀಮತಿ ಡಾ. ಶಾಂತಾಭಟ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಡಾ. ದೇವರಾಜ್ ಉಪನ್ಯಾಸ ನೀಡುವರು. ಪ್ಲಾಸ್ಟಿಕ್ ತ್ಯಾಜ್ಯದ ನಿರ್ವಹಣೆ ಕುರಿತು ಡಾ. ಜಯದೇವಪ್ಪ, ಹಸಿ ಕಸದ ನಿರ್ವಹಣೆ ಕುರಿತು ಡಾ. ಬಸವನಗೌಡ್ರು, ತಾರಸಿ ತೋಟ ಮತ್ತು ಗಿಡ ಮರಗಳ ನಿರ್ವಹಣೆ ಕುರಿತು ಡಾ. ಸುರೇಂದ್ರ, ವಾಯುಮಾಲಿನ್ಯ, ಶಬ್ದಮಾಲಿನ್ಯ ತಡೆಗಟ್ಟುವಿಕೆ ಕುರಿತು ಸರೋಜಮ್ಮ ಮುಂಡಾಸದ ಉಪನ್ಯಾಸ ನೀಡುವರು.

ವಿಶೇಷ ಆಹ್ವಾನಿತರಾಗಿ ಶ್ರೀಮತಿ ರೇಖಾ ಸುರೇಶ್, ಶ್ರೀಮತಿ ಶಿಲ್ಪ ಜಯಪ್ರಕಾಶ್, ಬಿ.ಟಿ. ಅಚ್ಯುತ್, ಶ್ರೀಮತಿ ಕಂಚಿಕೆರೆ ಸುಶೀಲಮ್ಮ, ಸಾಲಿಗ್ರಾಮ ಗಣೇಶ್ ಶೆಣೈ, ಶ್ರೀಮತಿ ರೇಖಾ ಬೀಳಗಿ, ಶ್ರೀಮತಿ ಮೀರಾ ಹನಗವಾಡಿ, ಬಸವಣ್ಣ, ಜಗದೀಶ್, ರಾಜಪ್ಪ ಆಗಮಿಸುವರು.

# ಬಿಜೆಪಿಯಲ್ಲಿ ಭಿನ್ನಮತೀಯರ ಭೀತಿ

**(1ನೇ ಪುಟದಿಂದ)** ತೊಡಗಿಸಿಕೊಂಡಿಲ್ಲ.

ಯಡಿಯೂರಪ್ಪನವರು ಚುನಾವಣಾ ಕಣಕ್ಕಿಳಿಯದಿರುವುದು ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ನಡುಕ ತಂದಿದೆ.

ಕೇವಲ ಯಡಿಯೂರಪ್ಪನವರಿಗಷ್ಟೇ ಅಲ್ಲದೇ, ವಿವಿಧ ಕಾರಣಗಳಿಗೆ ಸಚಿವ ಶ್ರೀರಾಮುಲು ಹಾಗೂ ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಪಕ್ಷದ ಮುಖಂಡರ ವಿರುದ್ಧ ಅಸಮಧಾನಗೊಂಡಿದ್ದಾರೆ.

ಇವರಿಬ್ಬರಿಗೂ ತಮ್ಮದೇ ಆದ ಶಾಸಕರ ಬೆಂಬಲವಿದೆ. ಅಸಮಾಧಾನವನ್ನು ರಾಜ್ಯಸಭಾ ಹಾಗೂ ಪದವೀಧರ ಶಿಕ್ಷಕರ ಕ್ಷೇತ್ರದಲ್ಲಿ ಪರೋಕ್ಷವಾಗಿ ವ್ಯಕ್ತಪಡಿಸಿದರೆ, ಪಕ್ಷದ ಅಭ್ಯರ್ಥಿಗಳಿಗೆ ಹಿನ್ನೆಡೆಯಾಗುತ್ತದೆ ಎಂಬ ಮಾಹಿತಿ ವರಿಷ್ಠರಿಗೆ ತಲುಪಿದೆ.

ಇದರ ಹಿನ್ನೆಲೆಯಲ್ಲಿ ಅರುಣ್‌ಸಿಂಗ್ ಹಠಾತ್ತನೆ ಬೆಂಗಳೂರಿಗೆ ಬಂದು ಎಲ್ಲರನ್ನು ಸಂತೈಸುವ, ಅದರಲ್ಲೂ ಯಡಿಯೂರಪ್ಪನವರನ್ನು ಮನವೊಲಿಸಿ, ಪರಿಷತ್ ಚುನಾವಣೆಯಲ್ಲಿ ಸಕ್ರಿಯವಾಗಿ ಬಳಸಿಕೊಳ್ಳಲು ಮುಂದಾಗಿದ್ದಾರೆ.

ಜೂನ್ 10 ರಂದು ನಡೆಯುತ್ತಿರುವ ರಾಜ್ಯಸಭಾ ಚುನಾವಣೆಯಲ್ಲಿ ಎರಡು ಸ್ಥಾನಗಳು ಸುಲಭವಾಗಿ ಬಿಜೆಪಿಗೆ ಮೊದಲ ಪ್ರಾಶಸ್ತ್ಯದಲ್ಲೇ ದೊರೆಯಲಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಮೂರು ಮಂದಿಯನ್ನು ಕಣಕ್ಕಿಳಿಸಿರುವ ಬಿಜೆಪಿ ತನ್ನ ಎಲ್ಲ ಅಭ್ಯರ್ಥಿಗಳನ್ನು ರಾಜ್ಯಸಭೆಗೆ ಕಳುಹಿಸಲು ಆಂತರಿಕ ಕಸರತ್ತು ನಡೆಸಿದೆ.

ಕಾಂಗ್ರೆಸ್-ಜೆಡಿಎಸ್‌ನ ಕಿತ್ತಾಟದಿಂದ ತನ್ನದಲ್ಲದ ನಾಲ್ಕನೇ ಸ್ಥಾನವನ್ನು ಬಿಜೆಪಿ ಕಸಿದುಕೊಳ್ಳಬಹುದಾಗಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲಿಯಾದರೂ, ಪಕ್ಷದಲ್ಲಿಯೇ ಅಸಮಾಧಾನಿತ ನಾಯಕರು ಹಾಗೂ ಶಾಸಕರು ತಿರುಗಿ ಬಿದ್ದರೆ ಅಭ್ಯರ್ಥಿಗಳು ಸೋಲುವ ಸ್ಥಿತಿ ಬರುತ್ತದೆ. ಇದನ್ನು ತಪ್ಪಿಸಲೆಂದೇ ಅರುಣ್‌ಸಿಂಗ್ ಹಠಾತ್ತನೆ ಬೆಂಗಳೂರಿಗೆ ಧಾವಿಸುತ್ತಿದ್ದಾರೆ.

# ತಾ.ಪಂ-ಜಿ.ಪಂ ಚುನಾವಣೆಗೆ ಸಿದ್ಧರಾಗಿ



**(1ನೇ ಪುಟದಿಂದ)** ವಸತಿ ಯೋಜನೆಯಡಿ ಮನೆಗಳು, ವಿವಿಧ ಸಮುದಾಯಗಳಿಗೆ ಭವನಗಳ ನಿರ್ಮಾಣ, ವಿವಿಧ ಅಭಿವೃದ್ಧಿ ನಿಗಮಗಳಡಿ ಸಾಲ ಸೌಲಭ್ಯ, ಗಂಗಾಕಲ್ಯಾಣ ಯೋಜನೆಯಡಿ 250 ಬೋರ್ ವೆಲ್‌ಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

**ಅರ್ಹರ ಮನೆ ಬಾಗಿಲಿಗೆ ಬಿ ಫಾರಂ:** ಕ್ಷೇತ್ರದಲ್ಲಿನ ತಾ.ಪಂ ಮತ್ತು ಜಿ.ಪಂ ಚುನಾವಣೆಗಳ ಆಕಾಂಕ್ಷಿಗಳಲ್ಲಿ ಕೇವಲ ಹಣಬಲ ಮಾತ್ರವಲ್ಲ. ಸಂಸದರು ಹಾಗೂ ಹಿರಿಯ ವರಿಷ್ಠರ ಜೊತೆ ಚರ್ಚಿಸಿ ಜನ ಬಲವನ್ನೂ ಪರಿಗಣಿಸಿ ಅರ್ಹರ ಅಭ್ಯರ್ಥಿಗಳ ಮನೆ ಬಾಗಿಲಿಗೆ ಬಿ ಫಾರಂ ಗಳನ್ನು ತಲುಪಿಸಲಾಗುವುದು ಎಂದು ಶಾಸಕರು ಸ್ಪಷ್ಟಪಡಿಸಿದರು.

ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್ ಮಾತನಾಡಿ, ಪ್ರತಿ ಮೂರು ತಿಂಗಳಿಗೊಮ್ಮೆ ಸಾರ್ವಜನಿಕರಿಗೆ ಫಲಾನುಭವಿಗಳು ಪಡೆದ ಸರ್ಕಾರದ ಸೌಲಭ್ಯಗಳನ್ನು ಗುರುತಿಸಿ ಮಾಹಿತಿಯನ್ನು ಮನೆ ಬಾಗಿಲಿಗೆ ರವಾನಿಸಬೇಕು. ಇದರಿಂದ ಪಕ್ಷ ಬಲಪಡಿಸುವುದು ಕಾರ್ಯಕಾರಿಣಿ ಸಮಿತಿ ಸಭೆಯ ಉದ್ದೇಶವಾಗಿದೆ. ವಿಧಾನಸಭೆಗೆ 10 ಜನ ಲೋಕಸಭೆಗೆ 30 ಜನರನ್ನೊಳಗೊಂಡ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದರು.

ಮಂಡಲ ವ್ಯಾಪ್ತಿಯ ಬೂತ್ ಮಟ್ಟದಲ್ಲಿ ತಂಡಗಳನ್ನು ರಚಿಸಿ ವಹಿಸಿರುವ ಜವಾಬ್ದಾರಿಗಳನ್ನು ಪಕ್ಷ ನಿಷ್ಠೆ ಪ್ರಾಮಾಣಿಕತೆಯಿಂದ ಪಾಲಿಸಬೇಕು. ಕಳೆದ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗೆ ಕಡಿಮೆ ಮತ ನೀಡಿ ಸಿ ದರ್ಜೆಯ ಬೂತ್ ಗಳ ಶಕ್ತೀಕರಣಕ್ಕೆ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಡಿ.ವಿ.ನಾಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್. ನಾಗರಾಜ್ ಮಾತನಾಡಿದರು.

ಪ.ಪಂ ಅಧ್ಯಕ್ಷ ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ, ಪಕ್ಷದ ವಿವಿಧ ಮೋರ್ಚಾಗಳ ಪದಾಧಿಕಾರಿಗಳಾದ ನಿಜಲಿಂಗಪ್ಪ, ಜೆ.ವಿ.ನಾಗರಾಜ್, ಬಸವರಾಜ್, ಹೆಚ್.ಜಿ. ಕೃಷ್ಣಮೂರ್ತಿ, ಕೆ.ಎಸ್.ಪ್ರಭು, ಕಾಂತರಾಜ್, ರವಿಕುಮಾರ್, ಪಾಪಲಿಂಗಪ್ಪ, ಇಂದ್ರೇಶ್, ಬಿಸ್ತುವಳ್ಳಿ ಬಾಬು, ಬೇವಿನಹಳ್ಳಿ ಕೆಂಚನಗೌಡ, ಮಂಜುನಾಥಯ್ಯ, ಫಣಿಯಾಪುರ ಲಿಂಗರಾಜ್, ಮಹಿಳಾ ಘಟಕದ ಪದ್ಮ ಮತ್ತಿತರರು ಭಾಗವಹಿಸಿದ್ದರು.

# ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಸ್ತುವಾರಿಯಾಗಿ ಜಿ.ಸಿ.ಲೋಕೇಶ



ದಾವಣಗೆರೆ, ಜೂ. 4- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಜಿ.ಸಿ. ಲೋಕೇಶ ಆಯ್ಕೆಯಾಗಿದ್ದಾರೆ.

ಈಚೆಗೆ ನಡೆದ ಸಂಘದ ಚುನಾವಣೆಯಲ್ಲಿ ಲೋಕೇಶ ಅವಿರೋಧವಾಗಿ ಚುನಾಯಿತಗೊಂಡಿದ್ದಾರೆ.

ಅಲ್ಲದೇ, ಸಂಘದ ದಾವಣಗೆರೆ ಜಿಲ್ಲಾ ಘಟಕದ ಉಸ್ತುವಾರಿಯನ್ನಾಗಿ ಲೋಕೇಶ್ ಅವರನ್ನು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ನೇಮಕ ಮಾಡಿದ್ದಾರೆ.

ಮೂಲತಃ ನ್ಯಾಮತಿ ತಾಲ್ಲೂಕಿನ ರಾಮೇಶ್ವರ ಗ್ರಾಮದವರಾದ ಲೋಕೇಶ, ಬಿ.ಕಾಂ ಪದವೀಧರರು. ಹೊನ್ನಾಳಿ ಹಿರೇಕಲ್ಮಠದ ವಿದ್ಯಾಸಂಸ್ಥೆಯಲ್ಲಿ ರೇಷ್ಮೆ ಕೃಷಿಯಲ್ಲಿ ಡಿಪ್ಲೋಮಾ ಮಾಡಿರುವ ಅವರು ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಡಿಪ್ಲೋಮಾ ಪೂರೈಸಿದ್ದಾರೆ.

1986 ರಲ್ಲಿ ಪತ್ರಿಕೋದ್ಯಮದ ಮೂಲಕ ವೃತ್ತಿ ಜೀವನ ಆರಂಭಿಸಿರುವ ಲೋಕೇಶ, ಇದೀಗ ಬೆಂಗಳೂರಿನ ಪ್ರತಿಷ್ಠಿತ ಪತ್ರಿಕೆಯಲ್ಲಿ ಹಿರಿಯ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ, ಪತ್ರಕರ್ತರ ಸಂಘಟನೆ ಸೇರಿದಂತೆ, ಸಾಮಾಜಿಕ ವಿವಿಧ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

# ಆರು ಪ್ಯಾರಾಲಿಂಪಿಕ್ ಪಟುಗಳಿಗೆ ಸಿಗದ ವೀಸಾ

ನವದೆಹಲಿ, ಜೂ. 4 – ಪ್ಯಾರಾಲಿಂಪಿಕ್‌ನಲ್ಲಿ ಎರಡು ಪದಕ ಪಡೆದಿದ್ದ ಸಿಂಘರಾಜ್ ಅಧಾನಾ ಸೇರಿದಂತೆ ಭಾರತೀಯ ಶೂಟಿಂಗ್ ತಂಡದ ಆರು ಸದಸ್ಯರು ಫ್ರಾನ್ಸ್‌ನಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ ವಿಶ್ವ ಶೂಟಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ವೀಸಾ ಪಡೆಯಲು ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರದ ಮಧ್ಯ ಪ್ರವೇಶದ ನಂತರವೂ ವೀಸಾ ಸಾಧ್ಯವಾಗಿಲ್ಲ.

ಟೋಕಿಯೋ ಪ್ಯಾರಾಲಿಂಪಿಕ್‌ನಲ್ಲಿ ಬಂಗಾರ ಪಡೆದಿದ್ದ ಅವನಿ ಲೇಖರ ಅವರು ಟ್ವಿಟ್ಟರ್ ಮೂಲಕ ನೀಡಿದ ಹೇಳಿಕೆಯಿಂದಾಗಿ ಈ ವಿಷಯ ಬೆಳಕಿಗೆ ಬಂದಿದೆ. ತಮ್ಮನ್ನು ಕರೆದೊಯ್ಯಲು ತಾಯಿ ಶ್ವೇತ ಜವಾರಿಯ ಹಾಗೂ ತರಬೇತುದಾರ ರಾಕೇಶ್ ಮನ್‌ಪತ್ ಅವರಿಗೆ ವೀಸಾ ನೀಡುವಂತೆ ಲೇಖರ ಕೋರಿದ್ದರು.

ಆದರೆ, ಪ್ಯಾರಾ ಶೂಟಿಂಗ್ ಪಟು ಲೇಖರ ಮತ್ತು ಅವರ ತರಬೇತುದಾರರ ವೀಸಾಗೆ ಅನುಮತಿ ದೊರೆತಿದೆ. ಆದರೆ, ತಾಯಿಗೆ ವೀಸಾ ದೊರೆತಿಲ್ಲ ಎಂದು ರಾಷ್ಟ್ರೀಯ ಮುಖ್ಯ ತರಬೇತುದಾರ ಜೈ ಪ್ರಕಾಶ್ ನೌಟಿಯಾಲ್ ತಿಳಿಸಿದ್ದಾರೆ.

ಫ್ರಾನ್ಸ್ ರಾಯಭಾರಿ ಕಚೇರಿ ವೀಸಾ ನಿರಾಕರಣೆಗೆ ಯಾವುದೇ ಕಾರಣ ನೀಡಿಲ್ಲ. ಆದರೆ, ವೀಸಾ ಅರ್ಜಿಗಳು ಹೆಚ್ಚಾಗಿರುವ ಕಾರಣದಿಂದಾಗಿ ನೀಡಲು ಸಾಧ್ಯವಾಗುತ್ತಿಲ್ಲ ಎಂದಷ್ಟೇ ತಿಳಿಸಿದೆ.

ಜೂನ್ 4ರಿಂದ 13ರವರೆಗೆ ಕ್ರೀಡಾಕೂಟ ನಡೆಯಲಿದೆ. ಗಣನೀಯ ಸಂಖ್ಯೆಯ ಭಾರತೀಯ ಪ್ಯಾರಾಲಿಂಪಿಕ್‌ಗಳು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.


**ಗೌರವಾನ್ವಿತ ಭೂಮಾಪನ ತಾಂತ್ರಿಕ ಹಾಗೂ ಪದನಿಮಿತ್ತ ದಾಖಲಾತಿಗಳ ಉಪನಿರ್ದೇಶಕರ ನ್ಯಾಯಾಲಯ, ಹಾವೇರಿ.**

**ಅಪೀಲು ಸಂಖ್ಯೆ : 68/2020-21**

ಅಪೀಲುದಾರರು: **ಶ್ರೀಮತಿ ಮಂಜವ್ವ ಮತ್ತು ಇತರರು**

**ವಿರುದ್ಧ**

ಎದುರುದಾರರು: **ಶ್ರೀ ಮಲ್ಲಪ್ಪ ಮತ್ತು ಇತರರು**

ಅಪೀಲುದಾರರುಗಳ ಪರ ನೀಡಲಾದ ಪ್ರಕಟಣಾ ನೋಟೀಸು

1. ಅಪೀಲುದಾರರುಗಳ ಪರ ಮಾನ್ಯ ಘನ ನ್ಯಾಯಾಲಯದಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆ:

2. ಅಪೀಲುದಾರರ ಅಜ್ಜ **ತಿರುಕಪ್ಪ ಮಡಿವಾಳರ ಚಳಗೇರಿ** ಇವರ ಮಕ್ಕಳಾದ **ಮಲ್ಲಪ್ಪ, ಬಸಪ್ಪ ಚಂದ್ರಪ್ಪನವರಾಗಿದ್ದು,** ಇವರಲ್ಲಿ **ಬಸಪ್ಪ ಬಿನ್ ತಿರುಕಪ್ಪ ಮಡಿವಾಳರ @ ಅಗಸರ** ರವರು **ದಿನಾಂಕ : 14.10.2019 ರಂದು ಮರಣ** ಹೊಂದಿರುತ್ತಾರೆ. ಸದರಿ ಮೇಲ್ಕಂಡ ಪ್ರಕರಣದಲ್ಲಿ ಹದ್ದು-ಬಸ್ತು, ಅಳತೆ ಮತ್ತು ಆಕಾರ ಬಂದು ವ್ಯತ್ಯಾಸವನ್ನು ದುರಸ್ತಿ ಪಡಿಸಿಕೊಳ್ಳಲು ಮಾನ್ಯ ಘನ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ **ಲೇಟ್ ಬಸಪ್ಪ ಬಿನ್ ತಿರುಕಪ್ಪ** ಇವರ ಮಕ್ಕಳಾದ **ಮಹೇಶ್ ಬಿನ್ ಲೇಟ್ ಬಸಪ್ಪ** ಮತ್ತು **ಸಂತೋಷ್ ಬಿನ್ ಲೇಟ್ ಬಸಪ್ಪ**, ಎಸ್.ಎಂ. ಕೃಷ್ಣ ನಗರ, ದಾವಣಗೆರೆ. ಇದಕ್ಕೆ ಸಂಬಂಧಿಸಿದಂತೆ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ : 28.06.2022ರಂದು ಮಧ್ಯಾಹ್ನ 3 ಗಂಟೆಗೆ ನೀವು ಖುದ್ದಾಗಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು.

**ದಿನಾಂಕ : 04.06.2022**
**ಸ್ಥಳ: ಹಾವೇರಿ**

**ಹೆಚ್. ಹನುಮಂತಪ್ಪ**
ಅರ್ಜಿದಾರರ ಪರ ವಕೀಲರು
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಕಾಂಪ್ಲೆಕ್ಸ್
ಪಿ.ಬಿ. ರಸ್ತೆ, ದಾವಣಗೆರೆ-577002., **ಮೊ: 94486 97908**


## ಬುಚ್ಚಣ್ಣ ಶಾಬಾದ್ ನಿಧನ



ದಾವಣಗೆರೆ ಎಸ್.ಓ.ಜಿ. ಕಾಲೋನಿ ವಾಸಿ ಬುಚ್ಚಣ್ಣ ಶಾಬಾದ್ (92) ಇವರು ದಿನಾಂಕ: 4.06.2022ರ ಶನಿವಾರ ರಾತ್ರಿ 7 ಗಂಟೆಗೆ ನಿಧನರಾದರು. ಮೃತರ ಪಾರ್ಥಿವ ಶರೀರವನ್ನು ವಿನೋಬನಗರ 3ನೇ ಮೇನ್, 15ನೇ ಕ್ರಾಸ್, ಅಮಿತ್ ಟಾಕೀಸ್ ಹತ್ತಿರವಿರುವ ತಮ್ಮ ಪುತ್ರನ ಮನೆಯಲ್ಲಿ ಇಡಲಾಗಿದೆ. ಪತ್ನಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 5.06.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಮುದಹದಡಿ ಎರಳ್ಳೇರ ಹನಮಗೌಡ ನಿಧನ



ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ವಾಸಿ ಎರಳ್ಳೇರ ಚಂದ್ರಪ್ಪ (67) ಇವರು ದಿನಾಂಕ : 4.6.2022ರ ಶನಿವಾರ ಸಂಜೆ 5 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.6.2022ರ ಭಾನುವಾರ ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ.

## ಅಜ್ಜಯ್ಯ ಆರ್. ನಿಧನ



ದಾವಣಗೆರೆ ಕಿರುವಾಡಿ ಲೇಔಟ್, ತ್ರಿಶೂಲ್ ಟಾಕೀಸ್ ಹಿಂಭಾಗದ ವಾಸಿ ಅಜ್ಜಯ್ಯ ಆರ್. (63) ಇವರು ದಿನಾಂಕ 04.05.2022ರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 05.06.2022ರ ಭಾನುವಾರ ಬೆಳಿಗ್ಗೆ 11.30ಕ್ಕೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಕಂಚಿಕೇರಿಯನ್ನು ಜಿ.ಪಂ. ಕ್ಷೇತ್ರವನ್ನಾಗಿಸಲು ಒತ್ತಾಯ



ಹರಪನಹಳ್ಳಿ, ಜೂ. 4- ಕಂಚಿಕೇರಿ ಗ್ರಾಮ ವನ್ನು ಜಿಲ್ಲಾ ಪಂಚಾಯಿತಿ ಕ್ಷೇತ್ರ ಮಾಡುವಂತೆ ಒತ್ತಾಯಿಸಿ ಕಂಚಿಕೇರಿ, ಹಳ್ಳಿಕೇರಿ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಈ ವೇಳೆ ಪಿ.ಎಲ್.ಡಿ. ಮಾಜಿ ಅಧ್ಯಕ್ಷ ರೆಡ್ಡಿ ಶಾಂತಕುಮಾರ್ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನ ಕಂಚಿಕೇರಿ 24 ಸದಸ್ಯರಿರುವ ಗ್ರೇಡ್ 1 ಗ್ರಾಮ ಪಂಚಾಯಿತಿಯಾಗಿದ್ದು, 1200 ಜನಸಂಖ್ಯೆಯನ್ನು ಹೊಂದಿರುವ ದೊಡ್ಡ ಗ್ರಾಮವಾಗಿದ್ದು, ದಾವಣಗೆರೆಯಿಂದ ಹರಪನಹಳ್ಳಿಗೆ ಹೋಗುವ ಮಧ್ಯದಲ್ಲಿ ಬರುವ ಗ್ರಾಮ ಪೂರ್ವಕ್ಕೆ 12 ಕಿ.ಮೀ ದೂರದಲ್ಲಿ ಅರಸಿಕೇರಿ ಪಶ್ಚಿಮಕ್ಕೆ 10 ಕಿ.ಮೀ ದೂರದಲ್ಲಿ ತೆಲಗಿ ಹೋಬಳಿ ಇದೆ. ಸುಮಾರು 15 ವರ್ಷಗಳಿಂದ ಜಿಲ್ಲಾ ಪಂಚಾಯಿತಿ ಕ್ಷೇತ್ರವಾಗಿತ್ತು. ಅದರೆ ಇತ್ತೀಚೆಗೆ ಕ್ಷೇತ್ರ ಮರು ವಿಂಗಡಣೆಯಲ್ಲಿ ಕಂಚಿಕೇರಿ ಕ್ಷೇತ್ರವನ್ನು ಬೇರ್ಪಡಿಸಿ, ಸ್ಥಳಾಂತರ ಮಾಡಿರುವುದು ಸರಿಯಾದ ನಿರ್ಧಾರವಲ್ಲ. ಆದ್ದರಿಂದ ಕಂಚಿಕೇರಿ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನಾಗಿ ಮಾಡಬೇಕೆಂದು ಒತ್ತಾಯಿಸಿದರು.

ತಾಲ್ಲೂಕು ಮಾಜಿ ಅಧ್ಯಕ್ಷ ಹೆಚ್. ರಾಜಪ್ಪ, ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಬಿ. ಅಂಜಿನಪ್ಪ ಮಾತನಾಡಿ, ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಮಾಡುವಾಗ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು ಹಾಗೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸುಲಭವಾಗಿ ಸಂಚರಿಸುವಂತೆ ಇರಬೇಕು. ಬೆಟ್ಟ, ಗುಡ್ಡ, ಅರಣ್ಯ, ಜಲಾಶಯ, ನದಿ ಸೇರಿದಂತೆ ಯಾವುದೇ ಅಡಚಣೆ ಇಲ್ಲದಿರುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂಬ ನಿಯಮದಡಿಯಲ್ಲಿ ಕಂಚಿಕೇರಿ ಕ್ಷೇತ್ರವು ಎಲ್ಲಾ ವಿಭಾಗದಲ್ಲಿ ಉತ್ತಮವಾಗಿದ್ದು, ಐತಿಹಾಸಿಕ ಶೈಕ್ಷಣಿಕ, ಸಾಂಸ್ಕೃತಿಕ, ವಾಣಿಜ್ಯವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಕಂಚಿಕೇರಿಯನ್ನು ಜಿಲ್ಲಾ ಪಂಚಾಯ್ತಿ ಕ್ಷೇತ್ರವನ್ನಾಗಿ ಮಾಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಕಂಚಿಕೇರಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರುಗಳಾದ ಪಾಟೀಲ್ ಕೆಂಚನಗೌಡ್ರು. ಕೆ.ಪಿ. ಬಸವರಾಜಪ್ಪ. ಗಂಗನರಸಿ ನಾಗರಾಜಪ್ಪ, ಮುಖಂಡರುಗಳಾದ ಸುನಿಲ್ ಕುಮಾರ್ ಬಿದ್ರಿ, ಸದ್ಯೋಜಾತಪ್ಪ, ನ್ಯಾಯವಾದಿ ಹಲಗೇರಿ ಮಂಜಪ್ಪ, ಕೊಟ್ರೇಶ್, ಭೋವಿ ಚಿನ್ನಪ್ಪ, ಕೆ.ಸಿ. ಶಿವಕುಮಾರ್, ಈಡಿಗರ ವೆಂಕಟೇಶ್, ಪೂಜಾರ್ ಮಂಜುನಾಥ, ಜಿ.ಎಂ. ಕರಿಬಸವಯ್ಯ, ಜೋಗಪ್ಪರ ಬಸಪ್ಪ, ಮಂಜಪ್ಪ, ಭೀಮಪ್ಪ, ವೈ. ಅಂಜಿನಪ್ಪ, ಜ್ಯೋತೆಪ್ಪ, ಕೆ. ಹನುಮಂತಪ್ಪ, ಹಾಲಾಳ ಹನುಮಂತಪ್ಪ, ಹಲಗೇರಿ ನಾಗರಾಜ ಉಪಸ್ಥಿತರಿದ್ದರು.



# ಹೊನ್ನಾಳಿಗೆ ಇಂದು ಸಚಿವದ್ವಯರು

ಹೊನ್ನಾಳಿ, ಜೂ.4- ತಾಲ್ಲೂಕಿನ ಸಾಸ್ವೇಹಳ್ಳಿ ಗ್ರಾಮದಲ್ಲಿ ನಾಳೆ ದಿನಾಂಕ 5ರ ಭಾನುವಾರ ನಡೆಯಲಿರುವ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮಕ್ಕೆ ನೀರಾವರಿ ಖಾತೆ ಸಚಿವ ಗೋವಿಂದ ಕಾರಜೋಳ, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ. ಎಂ.ಸಿದ್ದೇಶ್ವರ ಮತ್ತಿತರರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಶಾಸಕ ರೇಣುಕಾಚಾರ್ಯ ಅವರು ಇಂದು ವೀಕ್ಷಿಸಿದರು.

ಬೆನಕನಹಳ್ಳಿ ಸುತ್ತಮುತ್ತದ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರು ನೀಡುವ ಉದ್ದೇಶದಿಂದ 10 ಕೋಟಿ ರೂ. ವೆಚ್ಚದ ಕಾಮಗಾರಿ ಮಂಜೂರಾಗಿದ್ದು, ಕಾಮಗಾರಿ ಈಗಾಗಲೇ ಮುಕ್ತಾಯವಾಗಿದೆ. 59 ಕೋಟಿ ರೂಪಾಯಿ ವೆಚ್ಚದಲ್ಲಿ ಕೆರೆ ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಎಲ್ಲಾ ಕೆರೆಗಳು ತುಂಬಲಿವೆ. ಮುಖ್ಯಮಂತ್ರಿಗಳು ಬಂದಾಗ ಇವುಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಲಾಗುವುದು. ಸಚಿವತ್ರಯರನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಕರೆದುಕೊಂಡು ಹೋಗಲಾಗುವುದು. ಇದಕ್ಕಾಗಿ ಅದ್ಧೂರಿ ವೇದಿಕೆ ನಿರ್ಮಾಣ ಮಾಡಲಾಗಿದೆ ಎಂದರು.

ಉಪವಿಭಾಗಾಧಿಕಾರಿ ತಿಮ್ಮಣ್ಣ ಹುಲ್ಲುಮನಿ, ತಹಶೀಲ್ದಾರ್ ರಶ್ಮಿ ರೇಣುಕಾ, ಇಓ ರಾಮಭೋವಿ, ಸಿಪಿಐ ದೇವರಾಜ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಉಮಾದೇವಿ ಸೇರಿದಂತೆ ತಾಲೂಕು ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ಪುರಸಭೆ ಅಧ್ಯಕ್ಷ ರಂಗಪ್ಪ, ನಿಗಮದ ನಿರ್ದೇಶಕ ಮಾರುತಿನಾಯ್ಕ, ಪುರಸಭೆ ಮಾಜಿ ಅಧ್ಯಕ್ಷ ಕೆ.ವಿ.ಶ್ರೀಧರ್ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ರಂಗನಾಥ್, ಸದಸ್ಯರಾದ ಬಾಬು, ಮಾಜಿ ಸದಸ್ಯರಾದ ತಿಪ್ಪಣ್ಣ, ಮಹೇಶ್‌ಹುಡೇದ್, ಇಂಚರ ಮಂಜುನಾಥ್, ಎಲ್‌ಐಸಿ ಬಸವರಾಜ್ ಮತ್ತಿತರರಿದ್ದರು.

# ವಿಳಂಬದ ಕಾರಣಕ್ಕೆ ಬಹುಪತ್ನಿತ್ವ ದೂರು ರದ್ದಾಗದು: ಹೈಕೋರ್ಟ್

ಬೆಂಗಳೂರು, ಜೂ. 4 – ದೂರು ದಾಖಲಿಸುವುದು ವಿಳಂಬವಾಯಿತು ಎಂಬ ಕಾರಣಕ್ಕೆ ಬಹುಪತ್ನಿತ್ವದ ಪ್ರಕರಣದಿಂದ ಬಿಡುಗಡೆ ಮಾಡಲು ಸಾಧ್ಯವಾಗದು ಎಂದು ಹೈಕೋರ್ಟ್ ತಿಳಿಸಿದೆ.

76 ವರ್ಷದ ವ್ಯಕ್ತಿಯೊಬ್ಬರ ವಿರುದ್ಧ ಬಹುಪತ್ನಿತ್ವದ ದೂರು ದಾಖಲಿಸಲಾಗಿದೆ. ಈಗಲೂ ಮೂವರು ಮಹಿಳೆಯರನ್ನು ಮದುವೆಯಾಗಿರುವುದಾಗಿ ವ್ಯಕ್ತಿ ತಿಳಿಸಿದ್ದ.

ಆನಂದ್ ಸಿ. ಅಲಿಯಾಸ್ ಅಂಕು ಗೌಡ ಎಂಬುವವರ ಮೊದಲ ಪತ್ನಿ ಚಂದ್ರಮ್ಮ ಎಂಬುವವರು ಬಹುಪತ್ನಿತ್ವದ ದೂರು ದಾಖಲಿಸಿದ್ದಾರೆ. ಅವರ ಮೂರನೇ ಪತ್ನಿ ವರಲಕ್ಷ್ಮಿ ಹಾಗೂ ಅವರ ನಾಲ್ವರು ನಿಕಟವರ್ತಿ ಸ್ನೇಹಿತರು ಹಾಗೂ ಸಂಬಂಧಿಗಳ ವಿರುದ್ಧವೂ ದೂರು ದಾಖಲಿಸಲಾಗಿತ್ತು.

**ಮೂವರು ಪತ್ನಿಯರ ಗಂಡನ ಪ್ರಕರಣ**

ಮೂವರೊಂದಿಗೆ ಈಗಲೂ ಮದುವೆ ಹೊಂದಿರುವುದಾಗಿ ಆರೋಪಿತ ಒಪ್ಪಿಕೊಂಡಿದ್ದಾನೆ. ದೂರು ದಾಖಲಿಸುವುದು ವಿಳಂಬವಾಗಿರುವ ಮಾತ್ರಕ್ಕೆ ಪ್ರಕರಣ ಕೈ ಬಿಡಲಾಗದು ಎಂದು ಹೈಕೋರ್ಟ್ ಹೇಳಿದೆ.

1968ರಲ್ಲಿ ಚಂದ್ರಮ್ಮರನ್ನು ಆನಂದ್ ಮದುವೆಯಾಗಿದ್ದರು. 1972ರಲ್ಲಿ ಚಂದ್ರಮ್ಮ ಸಹೋದರಿ ಸಾವಿತ್ರಮ್ಮ ಜೊತೆ ಮದುವೆಯಾಗಿತ್ತು. ಎರಡನೇ ಮದುವೆಗೆ ಚಂದ್ರಮ್ಮ ಒಪ್ಪಿಕೊಂಡಿದ್ದಾಗಿ ಆನಂದ್ ತಿಳಿಸಿದ್ದರು.

1993ರಲ್ಲಿ ವರಲಕ್ಷ್ಮಿ ಅವರನ್ನು ಆನಂದ್ ಮದುವೆಯಾಗಿದ್ದರು. ಮೊದಲ ಇಬ್ಬರು ಪತ್ನಿಯರು ಮೂರನೇ ಮದುವೆಗೆ ಸಮ್ಮತಿಸಿದ್ದರು ಎಂದೂ ಆನಂದ್ ನ್ಯಾಯಾಲಯದ ಎದುರು ತಿಳಿಸಿದ್ದರು.

2018ರಲ್ಲಿ ಚಂದ್ರಮ್ಮ ಬಹುಪತ್ನಿತ್ವದ ಬಗ್ಗೆ ದೂರು ದಾಖಲಿಸಿದ್ದರು. ವರಲಕ್ಷ್ಮಿ ಜೊತೆ ಮದುವೆಯಾದಾಗ ಈ ಹಿಂದಿನ ಮದುವೆಗಳ ಬಗ್ಗೆ ಅವರಿಗೆ ತಿಳಿಸಿರಲಿಲ್ಲ ಎಂದು ಚಂದ್ರಮ್ಮ ದೂರಿದ್ದರು. ಆದರೆ, ಆನಂದ್ ಮೂರನೇ ಪತ್ನಿ ವರಲಕ್ಷ್ಮಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ ಬಹುಪತ್ನಿತ್ವದ ಪ್ರಕರಣ ಕೈ ಬಿಡುವಂತೆ (5ನೇ ಪುಟಕ್ಕೆ)

# ಬಿಐಇಟಿಯಲ್ಲಿ ವಿಶ್ವ ಪರಿಸರ ದಿನಾಚರಣೆ



ದಾವಣಗೆರೆ, ಜೂ. 4- ವಾಹನಗಳ ಓಡಾಟದಿಂದ ಕಾರ್ಬನ್ ಡೈ ಆಕ್ಸೈಡ್, ನೈಟ್ರೋಜನ್ ಆಕ್ಸೈಡ್ ಗಳು ಪರಿಸರ ಸೇರಿ 'ಹಸಿರು ಮನೆ ಪರಿಣಾಮ' ಉಂಟು ಮಾಡು ತ್ತವೆ. ಈ ಜಾಗತಿಕ ತಾಪ ಮಾನ ಏರಿಕೆ ಯಿಂದಾಗಿ ಕಳೆದ 20 ವರ್ಷಗಳಲ್ಲಿ ದಾವಣ ಗೆರೆಯ ತಾಪಮಾನ 37 ಡಿಗ್ರಿಯಿಂದ 39 ಡಿಗ್ರಿಗೆ ಏರಿದೆ ಎಂದು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ವಿವರಿಸಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗ ಮತ್ತು ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗೋ ಗ್ರೀನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಪರಿಸರ ಜಾಗೃತಿ ಮತ್ತು ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಹಾಗು ಪರಿಸರ ಸಮತೋಲನದ ಬಗ್ಗೆ ಬೆಳಕು ಚೆಲ್ಲಿದರು.

ವಿಭಾಗದ ಮುಖ್ಯಸ್ಥ ಡಾ. ಜಿ. ಎಸ್. ಸುನೀತಾ ಮಾತನಾಡಿ, ಕಾಲೇಜು ಆವರಣದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಾಲ್ನಡಿಗೆಯಲ್ಲೇ ಚಲಿಸುವ ಮೂಲಕ ವಾಹನದ ಬಳಕೆಯನ್ನು ಸ್ವಲ್ಪವಾದರೂ ತಪ್ಪಿಸಿ, ಆರೋಗ್ಯ ಕಾಪಾಡಿಕೊಳ್ಳುವ ಸಲಹೆ ನೀಡಿದರು.

ಎನ್ನೆಸ್ಸೆಸ್ ಸಂಯೋಜಕ ಡಾ. ಟಿ. ಕೆ. ಕೃಷ್ಣ ಕುಮಾರ್ ಮಾತನಾಡಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪರಿಸರ ಉಳಿಸುವ ಕಾರ್ಯದಲ್ಲಿ ನಿರತರಾಗಬೇಕಾದ ತುರ್ತು ಅಗತ್ಯದ ಬಗ್ಗೆ ತಿಳಿಸಿದರು.

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದ ವತಿಯಿಂದ ಇಲ್ಲಿಯವರೆಗೂ ಪರಿಸರ ಸಂಬಂಧಿತವಾಗಿ ಮಾಡಿರುವ ಯೋಜನೆಗಳನ್ನು ಅನಾವರಣ ಮಾಡಲಾಯಿತು.

ದಾವಣಗೆರೆ ಸ್ಮಾರ್ಟ್ ಸಿಟಿಯ 'ಕೂ ರೈಡ್ಸ್' ಸೈಕಲ್ ಬಳಕೆ ಮಾಡಿ ಪರಿಸರ ಸ್ನೇಹಿಯಾಗುವ ಬಗ್ಗೆ ಸಹಾಯಕ ಪ್ರಾಧ್ಯಾಪಕ ರಂಜಿತ್ ಪಾಟೀಲ್ ತಿಳಿಸಿದರು.


ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಸಿರು ವಸ್ತ್ರಗಳನ್ನು ಧರಿಸಿ ಬರುವುದರೊಂದಿಗೆ ಸಾಂಕೇತಿಕವಾಗಿ ಗಿಡ ನೆಡುವ ಮೂಲಕ ಪರಿಸರ ಉಳಿಸುವ ಪ್ರತಿಜ್ಞೆಯನ್ನು ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೈಗೊಂಡರು.

ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಭಾಗ್ಯ, ಸಹ ಪ್ರಾಧ್ಯಾಪಕರಾದ ಡಾ. ಜಿ.ಹೆಚ್. ಲೀಲಾ ಕಾರ್ಯಕ್ರಮ ಸಂಯೋಜಿಸಿದ್ದರು.

ಎಂ.ಕೆ. ರಿಷಿಕಾ, ಸೌಜನ್ಯ ಬಿ. ಉಪ್ಪಿನ್ ನಿರೂಪಿಸಿದರು. ಎಂ. ಸಂಪದ ವಂದಿಸಿದರು.

## ಪದವಾಣಿ-22

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

1) ಕಪ್ಪೆಯಂತೆ ಹಾರು 4
3) ನಟನೆಯ ಸಿಟ್ಟು 4
5) ಇವ ಕಾಣದ್ದನ್ನು ಕವಿ ಕಂಡ 2
7) ಈತ ಯಯಾತಿಯ ತಂದೆ 3
8) ದಾನವ ನೀಡಿದ ಉಚಿತ ಕೊಡುಗೆ 2
9) ಶಿಶಿರದಲ್ಲಿ ಕಂಡ ತಲೆ 2
10) ದಿವಸವೂ ತಂದೆ ಧಾನ್ಯ 3
12) ಇಪ್ಪತ್ತನಾಲ್ಕು ಗಂಟೆಗಳ ಕಾಲ 2
14) ನಡುವೆ ತಾಯಿಯನ್ನು ಪೀಡಿಸು 4
15) ರಾಜ್ಯದ ಸಚಿವ ಸಂಪುಟದ ನಾಯಕ 4

**ಮೇಲಿನಿಂದ ಕೆಳಕ್ಕೆ :**

1) ಮಂಗಳವಾರ 4
2) ದುರ್ಯೋಧನನನ್ನು ಹೀಗೂ ಕರೆವರು 4
3) ನಮ್ಮ ರಾಷ್ಟ್ರ ಪ್ರಾಣಿಯ ರೂಪ ಧರಿಸುವಿಕೆ 4
4) ಮಾನವನ್ನು ಹೊಂದಿರುವ ಗಾಳಿ 4
6) ಚಾರ ತಂದ ಸುದ್ದಿ 3
8) ಆಸ್ತಿಯಲ್ಲಿ ಭಾಗವನ್ನು ಪಡೆಯುವವನು 3
9) ವಿನ್ಯಾಸವಲ್ಲ, ಶಂಕು ಸ್ಥಾಪನೆ 4
10) ಮಧ್ಯೆ ಬಾಯಿ ಹಾಕಿ ಗದರಿಸು 4
11) ಸಾಮಗ್ರಿ ಸಲಕರಣೆ 4
3) ಒಂಭತ್ತು ಇರುಳಿನ ಹಬ್ಬ 4

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 21ರ ಉತ್ತರಗಳು :**

ಎಡದಿಂದ ಬಲಕ್ಕೆ: 1) ರಸಾಯನ 3) ಬಡವಿ 4 ರಿಕ್ತಕರ 6) ಹೊಟ್ಟೆಬಾಕ 7) ಅಂದುಗೆ 8) ಕರದಂಟು 11) ರಹದಾರಿ 13) ಗೂರಲು 14) ಪುಡಿಗಾಸು.

ಮೇಲಿನಿಂದ ಕೆಳಕ್ಕೆ: 1) ರವಿಚಂದ್ರ 2) ನರಿ 3) ಬಟಾಟೆ 5) ರಸಿಕ 6) ಹೊಗೆ 7) ಅಂಟು 8) ಕರ್ಪೂರ 9) ಹಸುಗೂಸು 10) ಮಡಿಲು 12) ರಿಪು.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ...

ಪ್ರತಿ ವರ್ಷ ಜೂನ್ 5 ರಂದು ನಾವೆಲ್ಲ 'ವಿಶ್ವ ಪರಿಸರ ದಿನ' ವನ್ನು ಆಚರಿಸುತ್ತೇವೆ. ಪರಿಸರದ ಬಗ್ಗೆ ತಿಳಿದುಕೊಳ್ಳುವುದು, ಅದರ ಬಗ್ಗೆ ಕಾಳಜಿ ತೋರಿಸಲು ಹಾಗೂ ಪರಿಸರವನ್ನು ಸಂರಕ್ಷಿಸಲು ಬೇಕಾದ ಬದಲಾವಣೆಗಳನ್ನು ನಮ್ಮಲ್ಲಿ ನಾವು ಮಾಡಿಕೊಳ್ಳುವ ದಿನವೇ ವಿಶ್ವ ಪರಿಸರ ದಿನ.

'ವಿಶ್ವ ಪರಿಸರ ದಿನ'ದಂದು ನಾವು ಲಕ್ಷಾಂತರ ಸಸಿಗಳನ್ನು ನೆಡುತ್ತೇವೆ. ಖಂಡಿತಾ, ನಮ್ಮೆಲ್ಲರ ಈ ಪ್ರಯತ್ನ ಒಳ್ಳೆಯದೇ ಆಗಿದೆ. ಸಸಿಗಳನ್ನು ನೆಟ್ಟು ಮರಗಳಾಗಿ ಬೆಳೆಸುವ ಈ ಕಾರ್ಯದಲ್ಲಿ ಇನ್ನು ಹೆಚ್ಚು ಹೆಚ್ಚು ಜನರು ಮುಂದೆ ಬರಬೇಕಾಗಿದೆ.

ದಾವಣಗೆರೆ ನಗರದಲ್ಲಿ ಸುಮಾರು 300 ಕ್ಕೂ ಹೆಚ್ಚು ಪಾರ್ಕ್‌ಗಳಿವೆ. ಇದರಲ್ಲಿ ಶೇ. 95 ರಷ್ಟು ಪಾರ್ಕ್‌ಗಳಿಗೆ ಕಾಂಪೌಂಡ್ ಗೋಡೆ ಕಟ್ಟಲಾಗಿದೆ. ಈ ಎಲ್ಲ ಪಾರ್ಕುಗಳಲ್ಲಿ ಕನಿಷ್ಠ 100-150 ಗಿಡಗಳನ್ನು ನೆಟ್ಟು ಬೆಳೆಸಿದರೆ ಸುಮಾರು 30,000-45,000 ಗಿಡಗಳನ್ನು ಬೆಳೆಸಿದಂತಾಗುತ್ತದೆ. ಈಗಾಗಲೇ ಕೆಲವು ಪಾರ್ಕುಗಳನ್ನು ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ನಾಗರಿಕರು ಅಭಿವೃದ್ಧಿ ಪಡಿಸಿ ನಿರ್ವಹಿಸುತ್ತಿದ್ದಾರೆ. ಈ ಪಾರ್ಕುಗಳ ಸಂಖ್ಯೆ ಶೇ. 10ಕ್ಕೆ ಸೀಮಿತವಾಗಿದೆ. ಇದೇ ರೀತಿ ನಾವು ಉಳಿದ ಎಲ್ಲ ಪಾರ್ಕುಗಳನ್ನು ಅಭಿವೃದ್ಧಿಗೊಳಿಸಿದರೆ, ನಮ್ಮ ದಾವಣಗೆರೆ ನಗರವು ಹಸಿರು ನಗರವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇದಕ್ಕಾಗಿ ಸ್ಥಳೀಯ ಸ್ವಯಂ ಸೇವಕರು ಹಾಗೂ ದಾನಿಗಳು ಬೇಕಾಗಿದ್ದಾರೆ. ಯಾರು ತಮ್ಮ ಪ್ರದೇಶದಲ್ಲಿರುವ ಪಾರ್ಕನ್ನು ಅಭಿವೃದ್ಧಿಪಡಿಸಬೇಕೆಂದು ಕೊಂಡಿದ್ದಾರೋ, ಅವರು ಮುಂದೆ ಬಂದರೆ ಮೇಲೆ ಕಾಣಿಸಿದ ಸಂಸ್ಥೆಗಳು ಆ ಪಾರ್ಕಿನಲ್ಲಿ ಬೇಕಾದ ಸಸಿಗಳನ್ನು ನೆಡುವುದರ ಜೊತೆಗೆ, ನೀರಿನ ವ್ಯವಸ್ಥೆ ಹಾಗೂ ಕೆಲಸಗಾರರನ್ನು ಕಳುಹಿಸಿಕೊಡುವರು. ಈ ಸ್ವಯಂ ಸೇವಕರು ತಮ್ಮ ಮನೆಯ ಸಮೀಪದ ಪಾರ್ಕುಗಳನ್ನು ತಮ್ಮದೇ ಪಾರ್ಕು ಎಂಬ ಭಾವನೆಯಿಂದ ಕಾಪಾಡಿಕೊಳ್ಳಬೇಕೆಂದು ಮೇಲೆ ಕಾಣಿಸಿದ ಸಂಸ್ಥೆಗಳ ಆಶಯ. ಪಾರ್ಕಿನ ಜವಾಬ್ದಾರಿ ತೆಗೆದುಕೊಳ್ಳ ಬಯಸುವ ಸ್ವಯಂ ಸೇವಕರು ಕೆಳಕಂಡ ನಂಬರಿಗೆ ಫೋನ್ ಮಾಡಿದರೆ, ಅವರಿಗೆ ಬೇಕಾದ ಎಲ್ಲಾ ಸಹಾಯವನ್ನು ಮೇಲೆ ಕಾಣಿಸಿದ ಸಂಸ್ಥೆಗಳು ನೀಡುತ್ತವೆ.

ಇದೇ ರೀತಿ ತಮ್ಮ ಮನೆ ಮುಂದೆ ಸಸಿಗಳನ್ನು ಬೆಳೆಸಬೇಕೆಂದು ಕೊಂಡವರು, ಕೆಳಕಂಡ ನಂಬರಿಗೆ ಫೋನು ಮಾಡಿ ತಿಳಿಸಿದರೆ ಸಂಸ್ಥೆಯವರೇ ಆಯಾ ಮನೆಯ ಬಾಗಿಲಿಗೆ ಬಂದು ಅವರಿಗೆ ಬೇಕಾದ ಸಸಿಗಳನ್ನು ಹಾಕಿ ಕೊಡುವರು. ಆಮೇಲೆ ಅವರೇ ಗಿಡಗಳಿಗೆ ನೀರು, ಗೊಬ್ಬರ ಹಾಕಿ ಬೆಳೆಸಿಕೊಳ್ಳಬೇಕು.

ದಾವಣಗೆರೆ ನಗರದ ಬಗ್ಗೆ, ಪರಿಸರದ ಬಗ್ಗೆ ಕಾಳಜಿ ಎಲ್ಲರಿಗೂ ಇದೆ. ಆದ್ದರಿಂದ ಪ್ರತಿ ಶಾಲೆ, ಕಾಲೇಜು, ಸಂಘ-ಸಂಸ್ಥೆಗಳು,



ವ್ಯಾಪಾರಸ್ಥರು ಮುಂದೆ ಬಂದು ಒಂದೊಂದು ಪಾರ್ಕನ್ನು ದತ್ತು ತೆಗೆದುಕೊಂಡರೆ ದಾವಣಗೆರೆಯನ್ನು ಹಸಿರು ನಗರ ಮಾಡುವ ಕೆಲಸ ಸುಲಭವಾಗುತ್ತದೆ. ಆದ್ದರಿಂದ, ದತ್ತು ತೆಗೆದುಕೊಳ್ಳಬೇಕೆಂದುಕೊಂಡಿರುವವರು ಕೆಳಕಂಡ ನಂಬರ್‌ಗೆ ಫೋನು ಮಾಡಿ ತಿಳಿಸಿದರೆ ಮುಂದಿನ ಕ್ರಮವನ್ನು ಸಂಸ್ಥೆಯವರು ತೆಗೆದುಕೊಳ್ಳುತ್ತಾರೆ.

ಈ ಸಂದರ್ಭದಲ್ಲಿ ಕೆಲವು ಸಂಘ-ಸಂಸ್ಥೆಗಳನ್ನು ಹಾಗೂ ಅನೇಕ ವ್ಯಕ್ತಿಗಳನ್ನು ನೆನೆಯಲೇ ಬೇಕು. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಡಾ.ದೇವರಾಜ್ ಟಿ ಎನ್‌ರವರ ಸಲಹೆಯಂತೆ ಮಾಜಿ ಮೇಯರ್ ಎಸ್.ಟಿ. ವೀರೇಶ್‌ರವರು ತಮ್ಮ ಅವಧಿಯಲ್ಲಿ ಸುಮಾರು 15 ಪಾರ್ಕುಗಳಲ್ಲಿ ಸಾವಿರಾರು ಗಿಡಗಳನ್ನು ಹಾಕಿ ಬೆಳೆಸಿದ್ದಾರೆ. ತರಳಬಾಳು ಬಡಾವಣೆಯ ಡಾ.ಶಶಿಧರ್ ತವಣೆ ಯವರು ನಾಲ್ಕು ಪಾರ್ಕುಗಳಲ್ಲಿ ನೂರಾರು ಗಿಡಗಳನ್ನು ಬೆಳೆಸಿದ್ದಾರೆ. ಕುಮಾರ್ ಜ್ಯುವೆಲರ್ಸ್‌ನ ಸಿದ್ದಪ್ಪ ತರಳಬಾಳು ಬಡಾವಣೆಯ ಒಂದು ಪಾರ್ಕನ್ನು ದತ್ತು ಪಡೆದು ನೂರಾರು ಗಿಡಗಳನ್ನು ಅವರ ಪಾರ್ಕಿನಲ್ಲಿ ಬೆಳೆಸಿದ್ದಾರೆ. ಇದೇ ರೀತಿ ವಿದ್ಯಾನಗರ-ತರಳಬಾಳು ಬಡಾವಣೆಯ ಡಾ.ಎಂ.ಜಿ. ಈಶ್ವರಪ್ಪ, ಬಸವನಗೌಡರು, ಮಲ್ಲಿಕಾರ್ಜುನ ಸ್ವಾಮಿ, ನಾಗಣ್ಣ, ಶಿವಕುಮಾರ ಬೂದಾಳು, ಶಂಭುಲಿಂಗಣ್ಣ, ಕರಿಯಪ್ಪ, ಜಯಾನಂದ್‌ರವರು, ವಾಗೀಶಪ್ಪನವರು ಇಲ್ಲಿನ ಪಾರ್ಕುಗಳಲ್ಲಿ ನೂರಾರು ಗಿಡಗಳನ್ನು ಬೆಳೆಸಿದ್ದಾರೆ.

ಎಂ.ಸಿ.ಸಿ. ಬಿ ಬ್ಲಾಕ್‌ನಲ್ಲಿ ಎಸ್. ಗುರುಮೂರ್ತಿ, ಕೆ.ಟಿ. ಗೋಪಾಲಗೌಡರು, ಗಡಿಗುಡಾಳ್ ಮಂಜುನಾಥ್, ತಮ್ಮ ಭಾಗದ ಪಾರ್ಕುಗಳಲ್ಲಿ ನೂರಾರು ಗಿಡಗಳನ್ನು ಬೆಳೆಸಿದ್ದಾರೆ. ಸ್ವಾಮಿ ವಿವೇಕಾನಂದ ಬಡಾವಣೆಯ ವೀರಭದ್ರಾಚಾರ್, ಡಾ. ನಾಗಪ್ರಕಾಶ್, ಅಗಡಿ ಮಹಾಂತೇಶ್, ಬಸವ ಬಳಗದ ಶ್ರೀಮತಿ ವೀಣಾ, ಡಾ. ಶಾಂತಾಭಟ್, ಡಾ.ಸುರೇಂದ್ರ, ಡಾ. ಶಿಶುಪಾಲ್, ಸಾಲು ಮರದ ವಸಂತ್, ವಕೀಲರಾದ ಎ.ಜಿ.ಪ್ರಸನ್ನ ಹೀಗೆ ಅನೇಕರು ನೂರಾರು ಗಿಡಗಳನ್ನು ಪ್ರತಿ ವರ್ಷ ನೆಟ್ಟು ಬೆಳೆಸುತ್ತಾ ಬಂದಿದ್ದಾರೆ. ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನವರು ಕಳೆದ ನಾಲ್ಕೈದು ವರ್ಷಗಳಲ್ಲಿ ಸುಮಾರು 5000 ಗಿಡಗಳನ್ನು ನಗರದ ಬೇರೆ ಬೇರೆ ಭಾಗಗಳಲ್ಲಿ ನೆಟ್ಟು ಸಾಕುತ್ತಾ ಬಂದಿದ್ದಾರೆ. ಇಲ್ಲಿ ಕೆಲವೇ ವ್ಯಕ್ತಿಗಳನ್ನು ಪಟ್ಟಿ ಮಾಡಲಾಗಿದೆ. ಆದರೆ ಎಷ್ಟೋ ಜನ ಎಲೆ ಮರೆ ಕಾಯಿಗಳಂತೆ ನಿರಂತರವಾಗಿ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರೆಲ್ಲರಿಗೂ ನಮ್ಮ ನಮನಗಳು ಹಾಗೂ ಅವರಿಂದ ಎಲ್ಲರೂ ಪ್ರೇರಣೆ ಪಡೆಯೋಣ, ಅವರಂತೆ ನಾವೂ ಕೆಲಸ ಮಾಡೋಣ.

ಇದೇ ರೀತಿ ನಮ್ಮ ನಗರದಲ್ಲಿ 'ತ್ಯಾಜ್ಯ ವಿಲೇವಾರಿ' ಕೆಲಸವೂ ಕೂಡ ವೈಜ್ಞಾನಿಕವಾಗಿ ಆಗಬೇಕಿದೆ. ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸಬೇಕಿದೆ. ನಮ್ಮ ನಗರವನ್ನು ಸ್ವಚ್ಛವಾಗಿಡಲು ಪ್ರತಿಯೊಬ್ಬರೂ ಶ್ರಮಿಸಬೇಕಿದೆ. ಆದ್ದರಿಂದ ನಾವೆಲ್ಲರು ವಿಶ್ವ ಪರಿಸರ ದಿನ ವನ್ನು ಮೇಲೆ ಕಾಣಿಸಿದ ಎಲ್ಲ ಕೆಲಸಗಳನ್ನು ಮಾಡುತ್ತಾ ಇಡೀ ವರ್ಷ ಆಚರಿಸೋಣ. ಬನ್ನಿ ಪ್ರತಿಯೊಬ್ಬರು ಕನಿಷ್ಠ ಪಕ್ಷ ಒಂದು ಗಿಡವನ್ನಾದರೂ ನೆಟ್ಟು ಪೋಷಿಸೋಣ. ದಾವಣಗೆರೆ ನಗರವನ್ನು 'ಸ್ವಚ್ಛ, ಸುಂದರ ಹಾಗೂ ಹಸಿರು ನಗರ'ವನ್ನಾಗಿಸೋಣ.

**- ದಿನೇಶ್ ಸಿ.ಜಿ.,**
ಅಧ್ಯಕ್ಷರು, ಅನ್‌ಮೋಲ್ ವಿದ್ಯಾಸಂಸ್ಥೆ,
ಶಿರಮಗೊಂಡನಹಳ್ಳಿ.

## ಶರಣರ ಆಗ್ರಹ

**(1ನೇ ಪುಟದಿಂದ)** ತಿರುಚುವ ಪ್ರಯತ್ನ ಮಾಡಬಾರದು. ಪಠ್ಯಗಳು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾಗಿರಬೇಕು. ಮಕ್ಕಳಲ್ಲಿ ಗೊಂದಲಗಳನ್ನು ಸೃಷ್ಟಿಸಬಾರದು. ಆ ದಿಸೆಯಲ್ಲಿ ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಶೂನ್ಯ ಪೀಠಾಧ್ಯಕ್ಷರಾದ ಡಾ. ಶಿವಮೂರ್ತಿ ಮುರುಘಾ ಶರಣರು ಆಗ್ರಹಿಸಿದ್ದಾರೆ.

# ಇಂದಿನಿಂದ ಬಿಜೆಪಿ ಎಸ್ಸಿ ಮೋರ್ಚಾ ಪ್ರವಾಸ

ಪ್ರಧಾನಿ ನರೇಂದ್ರ ಮೋದಿ ಅವರು 8 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅವರ ಸಾಧನೆಗಳನ್ನು ಜನರ ಮನೆ ಮನೆಗೆ ತಲುಪಿಸುವ ಕಾರ್ಯಕ್ರಮ ಇಂದಿನಿಂದ 8 ರವರೆಗೆ ಬಿಜೆಪಿ ಎಸ್ಸಿ ಮೋರ್ಚಾ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಎನ್. ಹನುಮಂತನಾಯ್ಕ ತಿಳಿಸಿದ್ದಾರೆ.

ಕೋ-ಆರ್ಡಿನೇಟರ್ ಆಗಿ ಹನುಮಂತನಾಯ್ಕ, ಸಹ ಕೋ-ಆರ್ಡಿನೇಟರ್ ಆಗಿ ಜಿ.ವಿ. ಗಂಗಾಧರ, ಅಂಜಿನಪ್ಪ ಅವರನ್ನು ನೇಮಕ ಮಾಡಲಾಗಿದೆ.

ಇಂದು ಬೆಳಿಗ್ಗೆ 10 ರಿಂದ ಹೊನ್ನಾಳಿ, ಮಧ್ಯಾಹ್ನ 1 ಗಂಟೆಗೆ ಹರಿಹರ ನಗರ ಮತ್ತು ಗ್ರಾಮಾಂತರ, 6 ರಂದು ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ, ಮಧ್ಯಾಹ್ನ 1 ಗಂಟೆಗೆ ದಕ್ಷಿಣ ವಿಧಾನ ಸಭಾ ಕ್ಷೇತ್ರ, 7 ರಂದು ಬೆಳಿಗ್ಗೆ 10 ಗಂಟೆಗೆ ಜಗಳೂರು ವಿಧಾನಸಭಾ ಕ್ಷೇತ್ರ ಹಾಗೂ ಮಧ್ಯಾಹ್ನ 1 ಗಂಟೆಗೆ ಮಾಯಕೊಂಡ ವಿಧಾನಸಭಾ ಕ್ಷೇತ್ರ, 8 ರಂದು ಬೆಳಿಗ್ಗೆ 11 ಗಂಟೆಗೆ ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸ ಹಮ್ಮಿಕೊಳ್ಳಲಾಗಿದೆ.

8 ಎಸ್ಸಿ ಮಂಡಲ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಕಾರ್ಯಕ್ರಮಗಳ ನೇತೃತ್ವ ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

# ಬಸವ ಪಥ

**(1ನೇ ಪುಟದಿಂದ)** 2015 ರಲ್ಲಿ ಕಾಂಗ್ರೆಸ್ ಸರ್ಕಾರ ಪಠ್ಯ ಪರಿಷ್ಕರಣೆ ಮಾಡಿದ ಬರಗೂರು ರಾಮಚಂದ್ರಪ್ಪ ಸಮಿತಿ ಮತ್ತು ಈಗಿನ ಸಮಿತಿಗೆ ಕೇವಲ ಒಂದು ವಾಕ್ಯದ ವ್ಯತ್ಯಾಸವಿದ್ದು, ಉಳಿದಂತೆ ಲಿಂಗದೀಕ್ಷೆ ಸೇರಿದಂತೆ ಎಲ್ಲಾ ವಿಷಯಗಳು ಬರಗೂರು ರಾಮಚಂದ್ರಪ್ಪ ಅವರ ಪಠ್ಯದಲ್ಲಿಯೂ ಇದೆ ಎಂದರು.

ಒಟ್ಟಾರೆ ಬಸವಣ್ಣನವರ ನಿಜ ಸ್ವರೂಪ ಹಾಗೂ ವಚನ ಸಾಹಿತ್ಯ ಪರಿಚಯ ಆಗಬೇಕು ಎಂಬುದು ಎಲ್ಲರ ಇಚ್ಛೆ. ಅದಕ್ಕಾಗಿ ಎಲ್ಲರ ಜತೆ ಸಮಾಲೋಚನೆ ಮಾಡುತ್ತೇವೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಹೆಡಗೆವಾರ್ ಅವರ ಪಠ್ಯವೂ ಇರಲಿದೆ. ಪರಿಷ್ಕೃತ ಪಠ್ಯಗಳಿಗೆ ಹೊಸ ಸಂಪುಟವನ್ನು ನೀಡಲಾಗುವುದು ಎಂದು ತಿಳಿಸಿದರು.

## ಸಾರ್ವಜನಿಕ ಪ್ರಕಟಣೆ

**ನನ್ನ ಕಕ್ಷಿದಾರರಾದ ಶ್ರೀ ಪ್ರವೀಣ್ ಬಿನ್ ಈಶ್ವರಪ್ಪ, ವಾಸ : ಎಸ್.ಎಸ್. ಲೇಔಟ್ ಬಿ ಬ್ಲಾಕ್, ದಾವಣಗೆರೆ, ಮೊಬೈಲ್ ನಂ. 9844156777 ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :**

ಷೆಡ್ಯೂಲ್ ಸ್ವತ್ತುಗಳು ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕು ಹಾದ್ರಿಹಳ್ಳಿ ಗ್ರಾಮದ ವಾಸಿಯಾದ ಶ್ರೀ ಹನುಮಂತಪ್ಪ ಹಡಗದ ಬಿನ್ ಕೊಟ್ರಪ್ಪ ಹಡಗದ ಇವರು ಮಾಲೀಕರಾಗಿರುತ್ತಾರೆ ಮತ್ತು ಅವರ ಹೆಸರಿಗೆ ಖಾತೆ ಇರುತ್ತದೆ ಎಂದು ತಿಳಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಪೈಕಿ ಸೈಟ್ ನಂ. 13, ಡೋರ್ ನಂ. 5542/13ರ ಸ್ವತ್ತಿಗೆ ಸಂಬಂಧಪಟ್ಟ ಶ್ರೀ ಹನುಮಂತಪ್ಪ ಹಡಗದ ಬಿನ್ ಕೊಟ್ರಪ್ಪ ಹಡಗದ ಇವರ ಹೆಸರಿಗೆ ದಿನಾಂಕ : 06.03.1998 ರಂದು ಎಸ್.ಆರ್.ನಂ. 9572/1997-98 ರಂತೆ ನೋಂದಣಿಯಾಗಿರುವ ಅಸಲು ಕ್ರಯಪತ್ರವು ಕಳೆದು ಹೋಗಿರುತ್ತದೆ ಎಂದು ತಿಳಿಸಿರುತ್ತಾರೆ. ಆ ಬಗ್ಗೆ ಅವರು ಪೊಲೀಸ್ ಕಂಪ್ಲೇಂಟ್ ಮತ್ತು ಪತ್ರ ಕಳೆದಿರುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನೂ ಸಹ ನೀಡಿರುತ್ತಾರೆ. ಸದರಿ ಸ್ವತ್ತನ್ನು ಮತ್ತು ಸೈಟ್ ನಂ. 12, ಡೋರ್ ನಂ. 5541/12ರ ಸ್ವತ್ತನ್ನೂ ಸಹ ನಮ್ಮ ಕಕ್ಷಿದಾರರು ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಬೇರೆ ಯಾರದೇ ಆಗಲೀ ತಂಟೆ, ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ ಒಂದು ವಾರದೊಳಗಾಗಿ ನನ್ನ ಕಕ್ಷಿದಾರರನ್ನಾಗಲೀ ಅಥವಾ ಕೆಳಕಂಡ ಅವರ ವಕೀಲರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಒಂದು ವಾರದೊಳಗಾಗಿ ಯಾವುದೇ ರೀತಿಯ ತಂಟೆ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳನ್ನು ಬೇರೆ ಯಾವುದೇ ವ್ಯಕ್ತಿಗಳ ಹಕ್ಕು, ಹಿತಾಸಕ್ತಿಗೆ ಒಳಪಟ್ಟಿರುವುದಿಲ್ಲ ಎಂದು ಪರಿಗಣಿಸಿ, ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಆ ನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ. ಷೆಡ್ಯೂಲ್ : 1) ದಾವಣಗೆರೆ ತಾಲ್ಲೂಕು, ಶಾಮನೂರು ಗ್ರಾಮದ ರಿ.ಸ.ನಂ. 41/3 ಡಿ ರಲ್ಲಿ ವಿಂಗಡಿಸಿರುವ ಸೈಟುಗಳ ಪೈಕಿ ಸೈಟ್ ನಂ. 12, ಡೋರ್ ನಂ. 5541/12ರ ವಿಸ್ತೀರ್ಣ 30x44.6+44.9/2 ವುಳ್ಳ, ವಾಸೋಪಯೋಗದ ಖಾಲಿ ನಿವೇಶನಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ. 11, ಪಶ್ಚಿಮಕ್ಕೆ : ಸೈಟ್ ನಂ. 13, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಬೇರೆಯವರ ಜಮೀನು.

2) ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ರಿ.ಸ.ನಂ 41/3ಡಿ ರಲ್ಲಿ ವಿಂಗಡಿಸಿರುವ ಸೈಟುಗಳ ಪೈಕಿ ಸೈಟ್ ನಂ. 13, ಡೋರ್ ನಂ. 5542/13ರ ವಿಸ್ತೀರ್ಣ 30x45 ವುಳ್ಳ ವಾಸೋಪಯೋಗದ ಖಾಲಿ ನಿವೇಶನಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ. 12, ಪಶ್ಚಿಮಕ್ಕೆ : ಸೈಟ್ ನಂ. 14, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಬೇರೆಯವರ ಜಮೀನು.

ಸಂಪರ್ಕಿಸಬೇಕಾದ ವಿಳಾಸ :
**ಶ್ರೀ ಆರ್.ಟಿ. ವಿನಯ್‌ಕುಮಾರ್**
ವಕೀಲರು, #82/18, ಪಿ.ಬಿ. ರಸ್ತೆ,
ಇಂಡಿಯನ್ ಬ್ಯಾಂಕ್ ಹತ್ತಿರ, ದಾವಣಗೆರೆ.
ಫೋ. : 9844597838

**ಸಹಿ/- ಆರ್.ಟಿ. ವಿನಯ್‌ಕುಮಾರ್**, ವಕೀಲರು
#1862/19, 4ನೇ ಮೇನ್, ಹೆಚ್‌ಆರ್‌ಬಿ ನಗರ,
ಸೇಂಟ್ ಜಾನ್ ಹೈ ಸ್ಕೂಲ್, ಹತ್ತಿರ,
ಶಿವಕುಮಾರ್‌ಸ್ವಾಮಿ ಬಡಾವಣೆ, 1ನೇ ಸ್ಟೇಜ್, ದಾವಣಗೆರೆ-5.

## ಮಾನ್ಯ ಮೂರನೇ ಹೆಚ್ಚುವರಿ ಸಿವಿಲ್ & ಜೆ.ಎಂ.ಎಫ್.ಸಿ. ನ್ಯಾಯಾಧೀಶರವರ ನ್ಯಾಯಾಲಯ (ಕಿ.ವಿ.) ದಾವಣಗೆರೆ.

**OS ಸಂಖ್ಯೆ : 530/2014**

**ವಾದಿ : ಕೆ.ಎಂ. ಹಾಲಸ್ವಾಮಿ ಬಿನ್ ಕೆ.ಎಂ. ವೀರಯ್ಯ, ವಯಸ್ಸು 50 ವರ್ಷ, ಡೋರ್ ನಂ. 132 ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ. ವಿರುದ್ಧ/ –**

**ಪ್ರತಿವಾದಿ : ರಾಧ ಎಂ.ಹೆಚ್. ಕೋಂ ವಿ. ದೇವರಾಜು**

**ಪ್ರಪೋಸ್ಡ್ ಪ್ರತಿವಾದಿ ನಂ. 4 : ಕೆ. ನಿತ್ಯಾನಂದ ಕಾಮತ್ ಬಿನ್ ಕೆ. ಉಮೇಶ್ ಕಾಮತ್, ಕಾಮತ್ ಟ್ರೇಡರ್ಸ್ ಕುಂದುವಾಡ ಕ್ರಾಸ್ ಹತ್ತಿರ ಪಿ.ಬಿ. ರೋಡ್, ದಾವಣಗೆರೆ.**

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರಪೋಸ್ಡ್ ಪ್ರತಿವಾದಿ ನಂ. 4 ಇವರಿಗೆ ನೀಡಲಾದ ನೋಟಿಸ್**

ಈ ಮೇಲ್ಕಂಡ ಕೇಸಿನಲ್ಲಿ ವಾದಿಯೂ, ಪ್ರತಿವಾದಿಯ ವಿರುದ್ಧ ದಾವಣಗೆರೆ ತಾಲ್ಲೂಕು ಆವರಗೆರೆಯ ರಿ.ಸ.ನಂ. 227, 242, 244, 245/1A, 245/2, 233, 233/3A, 17/2ರಲ್ಲಿ ಬರುವಂತಹ ಅಂಬಿಕ ನಗರದ ಸೈಟ್ ನಂ. 90 ಅಳತೆ 30x40 ಅಡಿ ಇದರ ಚಕ್ಕುಬಂದಿ : ಪೂರ್ವ : 30 ಅಡಿ ರೋಡ್, ಪಶ್ಚಿಮ : ಸೈಟ್ ನಂ. 89 ಉತ್ತರ : 30 ಅಡಿ ರೋಡ್, ದಕ್ಷಿಣ : ಸ.ನಂ. 241, ಷೆಡ್ಯೂಲ್ : ಆಸ್ತಿಗೆ ಶಾಶ್ವತ ಮತ್ತು ಮ್ಯಾಂಡಿಟರಿ ನಿರ್ಭಂಧಕಾಜ್ಞೆ ದಾವೆಯನ್ನು ದಾಖಲೆ ಮಾಡಿರುತ್ತಾರೆ. ಪ್ರತಿವಾದಿಯೂ ನಿಮ್ಮನ್ನು ದಾವೆಯಲ್ಲಿ ಸೇರಿಸಲು, ಆದೇಶ 1 ನಿಯಮ 10, ಸೆಕ್ಷನ್ 151 ರ ಸಿ.ಪಿ.ಸಿ. ಅಡಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. 4ನೇ ಪ್ರಪೋಸ್ಟ್ ಪ್ರತಿವಾದಿಯಾದ ನಿಮಗೆ ನ್ಯಾಯಾಲಯದಿಂದ ಹಾಗೂ ನೋಂದಾಯಿತ ಅಂಚೆ ಮೂಲಕ ನೋಟೀಸು ಕಳಿಸಿದಾಗ್ಯೂ ಸದರಿ ನೋಟೀಸು ಜಾರಿಯಾಗಿರುವುದಿಲ್ಲ. ಆದ್ದರಿಂದ ಈ ಮೇಲ್ಕಂಡ ಪ್ರಪೋಸ್ಡ್ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ತಾವು ದಿನಾಂಕ : 06.07.2022 ರಂದು ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 4.6.22 ರಂದು ಕೊಡಲ್ಪಟ್ಟಿದೆ.

**ನ್ಯಾಯಾಲಯದ ಅಪ್ಪಣೆ ಮೇರೆಗೆ**
**ಸಹಿ/- ಶಿರಸ್ತೇದಾರರು**
**ಸಿವಿಲ್ ನ್ಯಾಯಾಧೀಶರವರ ನ್ಯಾಯಲಯ (ಕಿ.ವಿ.)**
**ಮತ್ತು ಜೆ.ಎಂ.ಎಫ್.ಸಿ., ದಾವಣಗೆರೆ.**

**ವಾದಿ ಪರ ವಕೀಲರು**
**(ಕೆ.ಬಿ. ಶೈಲಶ್ರೀ)**




# ವಾರ ಭವಿಷ್ಯ

**ದಿನಾಂಕ : 05.06.2022 ರಿಂದ 11.06.2022**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳ ಬಗ್ಗೆ ಬಹಳ ಚಿಂತೆ ಮಾಡುತ್ತಿರುವ ನಿಮಗೆ, ಉನ್ನತಾಧಿಕಾರಿಗಳಿಂದ ಅನುಕೂಲವಾಗಲಿದೆ, ನಿಮಗೇ ಮರೆತುಹೋಗಿದ್ದ ಬಾಕಿ ಹಣವೊಂದು ಸಂದಾಯವಾಗಲಿದೆ. ಹಣಕಾಸಿನ ಹರಿವು ಉತ್ತಮವಾಗಿದ್ದು, ದೈನಂದಿನ ವ್ಯವಹಾರಗಳಿಗೆ ಯಾವ ತೊಂದರೆಯಿಲ್ಲ. ವಿದ್ಯಾರ್ಥಿಗಳಿಗೆ ಉನ್ನತಾಧ್ಯಯನಕ್ಕೆ ಬೇಕಾದ ಸಕಲ ಸವಲತ್ತುಗಳು ದೊರೆಯಲಿವೆ. ಬಂಧುಗಳೊಂದಿಗಿದ್ದ ಜಂಜಾಟಗಳು ದೂರವಾಗಲಿವೆ. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಸಾಧ್ಯವಿದ್ದಲ್ಲಿ ಪ್ರಯಾಣಗಳನ್ನು ಮುಂದೂಡಲು ಪ್ರಯತ್ನಿಸಿ. ಕುಲದೇವತಾರಾಧನೆ ಮಾಡಿರಿ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕೈಕೆಳಗಿನ ನೌಕರರು ಮಾಡುವ ತಪ್ಪಿನಿಂದಾಗಿ, ಮೇಲಾಧಿಕಾರಿಗಳ ವಾಗ್ದಂಡನೆಗೆ ಒಳಗಾಗುವರು. ಯುವಕರು ಆರಂಭಿಸಲಿರುವ ಹೊಸ ಯೋಜನೆಗಳಿಗೆ ನೆರವು ದೊರೆಯಲಿದೆ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರಿಗೆ ಸಭೆ, ಸಮಾರಂಭಗಳಲ್ಲಿ ಗೌರವ ಸಲ್ಲಲಿದೆ. ಅವಿವಾಹಿತ ಮಗಳಿಗೆ ಕಂಕಣ ಭಾಗ್ಯ ಒದಗಿಬರಲಿದೆ. ಆತ್ಮಗೌರವ ಒಳ್ಳೆಯದೇ ಆದರೂ ಅದು ಅತಿಯಾದಲ್ಲಿ, ಅದು ನಿಮ್ಮನ್ನು ಕಾಡಬಹುದು.ವಿನಾಕಾರಣ ಸಾಲ ಮಾಡಲು ಹೋದಲ್ಲಿ, ಮುಂದೆ ಶೂಲವಾಗಿ ಪರಿಣಮಿಸಬಹುದು. ಮಹಿಳೆಯರು ಆಭರಣವನ್ನು ಕೊಳ್ಳುವ ಮೊದಲು ಸಂಗಾತಿಯ ಆರ್ಥಿಕ ಪರಿಸ್ಥಿತಿ ಅರಿಯುವುದು ಮೇಲು. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಗೃಹ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೊದಲು, ಬೇಕಾಗುವ ಆರ್ಥಿಕ ಮೂಲವನ್ನು ಮೊದಲೇ ಹೊಂದಿಸಿಕೊಳ್ಳುವುದು ಮೇಲು. ನಿರುದ್ಯೋಗಿ ಪದವೀಧರರಿಗೆ ಸಾಧಾರಣ ವೇತನದ ನೌಕರಿ ಸಿಗಲಿದೆ. ಆಕಸ್ಮಿಕವಾಗಿ ಧನಲಾಭವಾಗಲಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಸು ಹಿನ್ನಡೆಯಾದರೂ ಚಿಂತೆಬೇಡ. ವಾಹನ ಖರೀದಿಯಲ್ಲಿ ಮೋಸಹೋಗಬಹುದು. ಹೊಸ ರೀತಿಯ ವಸ್ತ್ರವಿನ್ಯಾಸಕಾರರಿಗೆ, ದೇಶ-ವಿದೇಶಗಳಿಂದ ಬೇಡಿಕೆ ಬರಲಿದೆ. ವಿದೇಶದಲ್ಲಿ ಬಂಡವಾಳ ಹೂಡುವ ಮೊದಲು ವ್ಯವಹಾರದ ಅರಿವು ಚೆನ್ನಾಗಿರುವುದು ಉತ್ತಮ. ಶಸ್ತ್ರ ಚಿಕಿತ್ಸಾ ವೈದ್ಯರ ಆದಾಯದಲ್ಲಿ ಏರಿಕೆ. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ನಿಮ್ಮ ನಿರೀಕ್ಷೆಗೂ ಮೀರಿ ಹಣಕಾಸಿನ ಹರಿವು, ಒಳ್ಳೆಯವರಾಗಿ ಸಮಾಜದಲ್ಲಿರುವುದು ಒಳ್ಳೆಯದೇ ಆದರೂ, ಅದನ್ನು ದುರುಪಯೋಗಪಡಿಸಿಕೊಳ್ಳುವವರಿಂದ ಅಂತರ ಕಾಪಾಡಿಕೊಳ್ಳುವುದು ಮೇಲು. ಉದಾಸೀನ ಪ್ರವೃತ್ತಿಯಿಂದಾಗಿ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹಿನ್ನಡೆ ಸಾಧಿಸುವರು. ಸರ್ಕಾರಿ ನೌಕರರು, ಈ ಹಿಂದೆ ತಮ್ಮ ಮೇಲಿದ್ದ ಆಪಾದನೆಯಿಂದ ಮುಕ್ತರಾಗುವರು. ಹಿರಿಯರ ಆರೋಗ್ಯದಲ್ಲಿ ಅನಿರೀಕ್ಷಿತವಾಗಿ ಏರುಪೇರಾಗುವ ಸಂಭವವಿದೆ. ಸಾಧ್ಯವಾದಷ್ಟು ಪ್ರಯಾಣಗಳನ್ನು ಮುಂದೂಡಿರಿ. ಸರ್ಕಾರಿ ಮಟ್ಟದ ಕೆಲಸಗಳು ರಾಜಕಾರಣಿಗಳಿಂದ ಮಾತ್ರ ಸಾಧ್ಯ. ಅನಾವಶ್ಯಕ ವ್ಯವಹಾರಗಳಿಂದ ದೂರವಿರಿ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಆಗಬೇಕಾಗಿರುವ ಕೆಲಸ ಕಾರ್ಯಗಳಿಗೆ ಮಧ್ಯವರ್ತಿಗಳನ್ನು ಹೆಚ್ಚಾಗಿ ಅವಲಂಬಿಸದೇ, ನೀವೇ ಹೆಚ್ಚಿನ ಮುತುವರ್ಜಿ ವಹಿಸಿದಲ್ಲಿ ಶೀಘ್ರಾತಿಶೀಘ್ರದಲ್ಲಿ ನೆರವೇರಲಿದೆ. ಮನೆಯಲ್ಲಿ ಹಿರಿಯರೊಂದಿಗೆ ವಾಗ್ವಾದಗಳಾಗುವ ಸಂಭವವಿದೆ. ಸಾಧ್ಯವಿದ್ದಲ್ಲಿ ಅದನ್ನು ತಪ್ಪಿಸಲು ಯತ್ನಿಸಿ. ಸಂಗಾತಿಯ ಆದಾಯದಲ್ಲಿ ಹೆಚ್ಚಳ, ಅವಿವಾಹಿತರಿಗೆ ಕಂಕಣ ಬಲ, ಮತ್ತೊಬ್ಬರ ಹಣಕಾಸಿನ ವಿಚಾರದಲ್ಲಿ ಜಾಮೀನುದಾರರಾಗಲು ಹೋದಲ್ಲಿ, ಅದನ್ನು ತೀರಿಸುವ ಹೊಣೆ ನಿಮ್ಮದಾಗಬಹುದು. ಬಹಳ ದಿನಗಳ ನಂತರ ಸಹಪಾಠಿಗಳ ಭೇಟಿ, ಅತಿಯಾದ ಮೋಜು -ಮಸ್ತಿಯಿಂದ ದೂರವಿರಿ. ನಟ ನಟಿಯರ ಸಂಭಾವನೆ ಏರಿಕೆಯಾಗಲಿದೆ. ಮಿತಿಮೀರುತ್ತಿ ರುವ ಖರ್ಚಿಗೊಂದು ಕಡಿವಾಣ ಹಾಕಿರಿ. ಭಾನು-ಗುರು-ಶುಕ್ರ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಅರ್ಥವಿಲ್ಲದ ಅಥವಾ ಮಿತಿಮೀರಿದ ಮೋಜು, ಮಸ್ತಿಗಳಿಗಾಗಿ ಮಾಡಿದ ಸಾಲಗಳನ್ನು ತೀರಿಸಲು ಹರಸಾಹಸ ಪಡುವಿರಿ. ಅಲ್ಲದೇ ನೆರವಿಗಾಗಿ ಬಂಧುಗಳ ಮೊರೆ ಹೋಗುವಿರಿ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ಅದರಲ್ಲೂ ಸ್ತ್ರೀಯರು ಒತ್ತಡದ ವಾತಾವರಣವನ್ನು ಎದುರಿಸಬೇಕಾದೀತು. ತಾಳ್ಮೆಯೊಂದೇ ಇದಕ್ಕಿರುವ ಪರಿಹಾರ. ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಹಾರ್ದತೆಯಿಂದ ವರ್ತಿಸುವಂತೆ ತಮ್ಮ ನೌಕರರಿಗೆ ತಿಳಿಸುವುದು ಮೇಲು. ವ್ಯವಹಾರಗಳಲ್ಲಿ ನಂಬಿಕೆಗಿಂತ ಪ್ರಾಮಾಣಿಕತೆಯೇ ಮುಖ್ಯ ಎಂಬು ದನ್ನು ಮರೆಯಬೇಡಿ. ಬರಬೇಕಾಗಿರುವ ಹಣವನ್ನು ನಂಬಿಕೊಂಡು ಮತ್ತೊಬ್ಬರಿಗೆ ಭರವಸೆ ಕೊಡಬೇಡಿ. ಮಕ್ಕಳ ಪ್ರಗತಿಗಾಗಿ ಹೆಚ್ಚಿನ ಶ್ರಮ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಕಾಣದ ಕೈಯಿಂದಾಗಿ ಹೋಗಿದ್ದ ಮರ್ಯಾದೆಯನ್ನು ಕ್ರೀಡಾಪಟುಗಳು ಮರಳಿ ಪಡೆಯುವರು. ಜಾಗತಿಕ ಮಟ್ಟದಲ್ಲಿ ಹೆಸರು ಗಳಿಸುವರು. ರಾಜಕಾರಣದಲ್ಲಿರುವ ಮಹಿಳೆಯರಿಗೆ ಪಕ್ಷದ ವರಿಷ್ಠರಿಂದ ಹೊಸ ಜವಾಬ್ದಾರಿಯೊಂದನ್ನು ನಿಭಾಯಿಸುವಂತೆ ಆದೇಶ ಬರಲಿದೆ. ಚಿಂತಕರು ಹಾಗೂ ಸಾಹಿತಿಗಳು ತಾವಾಡಲಿರುವ ಮಾತಿನಿಂದಾಗ ಬಹುದಾದ ಸಾಮಾಜಿಕ ಪರಿಣಾಮಗಳ ಬಗ್ಗೆ ಆಲೋಚಿಸುವುದು ಉತ್ತಮ. ನ್ಯಾಯಾಲಯದ ಮೆಟ್ಟಿಲೇರಿರುವ ಮೊಕ್ಕದ್ದಮೆಯನ್ನು, ಹಿರಿಯರ ಸಮಕ್ಷಮದಲ್ಲಿ ರಾಜೀ ಪಂಚಾಯ್ತಿ ಮುಖಾಂತರ ಬಗೆಹರಿಸಿಕೊಳ್ಳುವುದು ಮೇಲು. ಆದಾಯದ ಮೂಲದಲ್ಲಿ ಹೆಚ್ಚಳವೇನೂ ಇಲ್ಲದಿರುವುದರಿಂದ ಖರ್ಚು-ವೆಚ್ಚದ ಬಗ್ಗೆ ಹಿಡಿತವಿರುವುದು ಉತ್ತಮ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮಡದಿಯ ಅನಾರೋಗ್ಯ ಮತ್ತು ಹೆಚ್ಚುತ್ತಿರುವ ಕೆಲಸಗಳ ಒತ್ತಡ ಇವುಗಳಲ್ಲಿ ಯಾವುದಕ್ಕೆ ಹೆಚ್ಚಿನ ಗಮನ ಕೊಡುವುದು ಎಂಬ ಗೊಂದಲಕ್ಕೆ ಒಳಗಾಗುವಿರಿ. ಉನ್ನತ ಹುದ್ದೆಯಲ್ಲಿರುವ ಮೇಲಾಧಿಕಾರಿಗಳು ಕರ್ತವ್ಯದಲ್ಲಿ ಮೈಮರೆಯದಿರುವುದು ಉತ್ತಮ, ಇಲ್ಲವಾದಲ್ಲಿ ತಲೆದಂಡ ತೆರಬೇಕಾದೀತು. ಹಣಕಾಸಿನ ಒಳಹರಿವು ಚೆನ್ನಾಗಿಯೇ ಇರುವುದರಿಂದ ಆರ್ಥಿಕ ಪರಿಸ್ಥಿತಿ ಉತ್ತಮ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರಿಗೆ ಮಾನ-ಸನ್ಮಾನಗಳಾಗಲಿವೆ. ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಹೆಚ್ಚಿನ ಹಣ ವೆಚ್ಚವಾಗಲಿದೆ. ರಕ್ಷಣಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವವರಿಗೆ, ಬಿಡುವಿಲ್ಲದ ಕೆಲಸದಿಂದಾಗಿ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಲಿದೆ, ಗುರುಗಳ ಸೇವೆ ಮಾಡಿರಿ. ಮಂಗಳ-ಶುಕ್ರ-ಶನಿ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಬದುಕಿನಲ್ಲಿ ಎರಗಬಹುದಾದ ಅಥವಾ ಅನಿರೀಕ್ಷಿತವಾಗಿ ಬರಲಿರುವ ಸಮಸ್ಯೆಗಳನ್ನು ಎದುರಿಸಲು ಅಪಾರ ತಾಳ್ಮೆ ಅತ್ಯಗತ್ಯ ಕೃಷಿ ಕ್ಷೇತ್ರದಲ್ಲಿರುವವರಿಗೆ ಸಂಪಾದನೆ ಹೆಚ್ಚಿದರೂ ಮಧ್ಯಂತರದಲ್ಲಿ ಕಾರ್ಮಿಕರ ಸಮಸ್ಯೆ ಕಾಡಲಿದೆ. ವೈಯಕ್ತಿಕ ಸಮಸ್ಯೆಗಳನ್ನು ಅನಾಪ್ತರ ಬಳಿ ಹೇಳಿಕೊಳ್ಳಬೇಡಿ, ರಾಜಕೀಯ ವ್ಯಕ್ತಿಗಳು, ಪಕ್ಷದ ಹಿರಿಯರು ತಮ್ಮ ಬಗ್ಗೆ ತೋರುವ ಅಲಕ್ಷೆಯಿಂದಾಗಿ ಪಕ್ಷದಲ್ಲಿ ಮುಂದುವರೆಯುವುದರ ಬಗ್ಗೆ ಗಂಭೀರವಾಗಿ ಆಲೋಚಿಸುವರು. ಸೌಂದರ್ಯ ವರ್ಧಕಗಳನ್ನು ತಯಾರಿಸುವವರ ಸರಕುಗಳಿಗೆ ಹೆಚ್ಚಿನ ಬೇಡಿಕೆಯೊಂದಿಗೆ ಲಾಭವೂ ಹೆಚ್ಚಲಿದೆ. ಅಮೂಲ್ಯ ವಸ್ತುಗಳು ಕಳೆದು ಹೋಗಲಿವೆ ಜಾಗ್ರತೆ. ಭಾನು-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಸಂಪಾದನೆ ಹೆಚ್ಚಿದಷ್ಟೂ ಜವಾಬ್ದಾರಿಯೂ ಹೆಚ್ಚಲಿದೆ. ಸಾಮಾಜಿಕ ಕೆಲಸಗಳು ಮಂದಗತಿಯಲ್ಲಿ ಸಾಗಿದರೂ, ವೈಯಕ್ತಿಕ ಕೆಲಸಗಳು ಹೆಚ್ಚು ಯಶಸ್ಸನ್ನು ಪಡೆಯಲಿವೆ. ಹಿರಿಯರೊಂದಿಗೆ ವಾಗ್ವಾದ ಮಾಡದೆ ಅವರ ಭಾವನೆಗಳನ್ನು ಗೌರವಿಸುವುದು ಉತ್ತಮ. ಗಳಿಕೆಗೆ ತಕ್ಕಂತೆ ಖರ್ಚೂ ಇರುವುದರಿಂದ, ಉಳಿತಾಯದ ಬಗ್ಗೆ ಸದ್ಯಕ್ಕೆ ಯೋಚಿಸುವುದು ಬೇಡ. ಅನಿವಾರ್ಯವಾಗಿ ಕೆಲಕಾಲ ಬಂಧುಗಳ ಮನೆಯಲ್ಲಿ ಇರಲೇಬೇಕಾದ ಸನ್ನಿವೇಶ ಎದುರಾಗಲಿದೆ. ರಾಜಕಾರಣಿಗಳಿಗೆ ಪಕ್ಷದ ಹಿರಿಯರ ಸಂಪರ್ಕ ಬರಲಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳುವುದು ಉತ್ತಮ. ಮಂಗಳ-ಬುಧ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಈ ಹಿಂದೆ ಸಮಾಜದ ಒಳಿತಿಗೆಂದು ನೀವು ಮಾಡಿದ ಕೆಲಸಗಳು ಈಗ ಫಲ ಕೊಡಲಿವೆ. ಬೇರೆಯರ ಸಮಸ್ಯೆಗಳಿಗೆ ಸ್ಪಂದಿಸುವ ನೀವು, ನಿಮ್ಮ ಕೌಟುಂಬಿಕ ಸಮಸ್ಯೆಗಳನ್ನು ಅಲಕ್ಷಿಸುವುದು ಸರಿಯಲ್ಲ. ನಿರೀಕ್ಷಿತ ಆದಾಯವಿರುವುದರಿಂದ ಅದರ ಚಿಂತೆ ಬೇಡ. ಆಸ್ತಿ ಅಥವಾ ನಿವೇಶನ ಖರೀದಿ ಮಾಡುವ ವಿಚಾರವಿದ್ದಲ್ಲಿ ಈಗ ಮುಂದುವರೆಯಲು ಅಡ್ಡಿಯಿಲ್ಲ. ಕೈಗಾರಿಕೋದ್ಯಮಿಗಳು ಯಂತ್ರೋಪಕರಣಗಳನ್ನು ಖರೀದಿಸುವ ಮುನ್ನ ವ್ಯವಹಾರ ಜ್ಞಾನ ತಿಳಿದಿರುವುದು ಒಳಿತು, ಹಿರಿಯರ ಆರೋಗ್ಯದ ಕಡೆ ಗಮನವಿಡಿ. ಕುಲ ದೇವತಾರಾಧನೆ ಮಾಡಿರಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮ ಅನೇಕ ಮಹತ್ತರ ಕಾರ್ಯಗಳಿಗೆ ಬಂಧುಗಳು ತಾವಾಗಿಯೇ ಮುಕ್ತ ಹಸ್ತದಿಂದ ನೆರವು ನೀಡುವರು, ಆದರೆ ಇದು ಸದುಪಯೋಗವಾಗುವಂತೆ ನೋಡಿಕೊಳ್ಳಿ. ಉನ್ನತಾಧ್ಯಯನ ಮಾಡಬಯಸುವ ಬಡ ವಿದ್ಯಾರ್ಥಿಗಳಿಗೆ ಸಮಾಜದಿಂದ ಆರ್ಥಿಕ ನೆರವು ದೊರೆಯಲಿದೆ. ಸಂಘ-ಸಂಸ್ಥೆಗಳಲ್ಲಿ ಬಹಳಕಾಲದಿಂದ ದುಡಿದ ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರೆಯಲಿದೆ. ಹಣಕಾಸಿನ ಹರಿವು ಉತ್ತಮವಾಗಿದ್ದು, ಅನೇಕ ಆರ್ಥಿಕ ಸಮಸ್ಯೆಗಳು ಬಗೆಹರಿಯಲಿವೆ. ಲೇವಾದೇವಿ ವ್ಯವಹಾರದಲ್ಲಿ, ಹೆಚ್ಚಿನ ಲಾಭ ಬರದಿದ್ದರೂ, ನಿರೀಕ್ಷಿತ ಮಟ್ಟದ ಲಾಭಾಂಶವನ್ನು ಕಾಣುವಿರಿ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಬೇಡ. ಭಾನು-ಬುಧ-ಗುರು-ಶುಭ ದಿನಗಳು,

## ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿ ದಿನೇಶ್ ಕೆ.ಶೆಟ್ಟಿ ಆಯ್ಕೆ



**ಸಂತಪೌಲರ ವಿದ್ಯಾಸಂಸ್ಥೆಯ ಅಮೃತ ಮಹೋತ್ಸವ ಕಾರ್ಯಕ್ರಮಗಳಿಗೆ ಚಾಲನೆ**

ದಾವಣಗೆರೆ, ಜೂ.4- ನಗರದ ಸಂತಪೌಲರ ವಿದ್ಯಾಸಂಸ್ಥೆಯು ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದು, ಇಂದಿನಿಂದ ಅಮೃತ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಇಂದು ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರನ್ನು ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ವಿದ್ಯಾಸಂಸ್ಥೆಯ ಆವರಣದಲ್ಲಿ ಇಂದು ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಮತ್ತು ಹಾಲಿ ವಿದ್ಯಾರ್ಥಿಗಳ ಸಮ್ಮುಖದಲ್ಲಿ ದಿನೇಶ್ ಕೆ.ಶೆಟ್ಟಿಯವರ ಆಯ್ಕೆಯನ್ನು ಘೋಷಿಸಿದ ಶಾಲಾ ಆಡಳಿತ ಮಂಡಳಿ ಹೂಗುಚ್ಛ ನೀಡಿ ಅಭಿನಂದಿಸಿತು.

ಇದೇ ವೇಳೆ ಅಮೃತ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಬಲೂನ್‌ಗಳನ್ನು ಆಕಾಶಕ್ಕೇರಿಸುವ ಮೂಲಕ ಚಾಲನೆ ನೀಡಿದ ಹಳೆಯ ವಿದ್ಯಾರ್ಥಿಗಳಾದ ಡಾ|| ದೀಪಕ್ ಬೊಂದಾಡೆ, ಡಾ|| ಪ್ರಭು ಬಸವನಗೌಡ, ಡಾ|| ಲತಾ ಮತ್ತು ಚಿಗಟೇರಿ ಮುರುಘಾ ರಾಜೇಂದ್ರ ಅವರು ಶುಭ ಕೋರಿದರು.

ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಸಿಸ್ಟರ್ ಅಲ್ಬಿನಾ, ಸಿಸ್ಟರ್ ಮಾರ್ಜರಿ, ಸಿಸ್ಟರ್ ಸಮಂತಾ, ಪಾಲಿಕೆ ಮಾಜಿ ಸದಸ್ಯರಾದ ಕು|| ಜಯಮ್ಮ, ತೋಟಗಾರಿಕೆ ಇಲಾಖೆಯ ಶ್ರೀಮತಿ ರೇಷ್ಮಾ, ಶ್ರೀಮತಿ ಮೋನಿಕಾ, ರವೀಂದ್ರ ಸ್ವಾಮಿ ಮತ್ತಿತರರಿದ್ದರು.

ವಿದ್ಯಾಸಂಸ್ಥೆಯ ಶಿಕ್ಷಕಿಯರ ಪ್ರಾರ್ಥನೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಶ್ರೀಮತಿ ಎನ್.ಕೆ.ಮಂಜುಳಾ ಸ್ವಾಗತಿಸಿದರೆ, ಫಿಲೋಮಿನಾ ವಂದಿಸಿದರು.

## ನಗರದಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆ, ಪ್ರಯೋಗಾಲಯ ಕಟ್ಟಡ ಲೋಕಾರ್ಪಣೆ

### ವರ್ಚ್ಯುಯಲ್ ಮೂಲಕ ಸಿಎಂ ಬೊಮ್ಮಾಯಿ ಉದ್ಘಾಟನೆ

ದಾವಣಗೆರೆ : ನಗರದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿ ಆವರಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟನೆ ಹಾಗೂ ನೂತನ ಕೇಂದ್ರ ಪರಿಸರ ಪ್ರಯೋಗಾಲಯ -2 (ಪರಿಸರ ಭವನ) ಕಟ್ಟಡದ ಲೋಕಾರ್ಪಣೆ ಸಮಾರಂಭ ನಡೆಯಲಿದೆ.

ವರ್ಚ್ಯುಯಲ್ ಹೋಸ್ಟಿಂಗ್ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದಾರೆ. ಪರಿಸರ, ಜೀವಿಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಡಾ. ಶಾಂತ್ ಎ.ತಿಮ್ಮಯ್ಯ ಹಾಗೂ ವಿಧಾನ ಪರಿಷತ್ ಸದಸ್ಯರುಗಳು (ವರ್ಚ್ಯುಯಲ್) ಉಪಸ್ಥಿತರಿರುವರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಡಾ. ಜಿ. ಎಂ. ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಮಾಡಾಳ್ ವಿರೂಪಾಕ್ಷಪ್ಪ, ಎಂ.ಪಿ. ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರಪ್ಪ, ಎಸ್. ರಾಮಪ್ಪ, ಸರ್ಕಾರಿ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್, ಚಿತ್ರದುರ್ಗ ವಲಯ ಕಛೇರಿಯ ಹಿರಿಯ ಪರಿಸರ ಅಧಿಕಾರಿ ಬಿ.ಎಸ್. ಮುರುಳೀಧರ ಈ ಸಂದರ್ಭದಲ್ಲಿ ಉಪಸ್ಥಿತರಿರುವರು.

## ದೇವರಬೆಳಕೆರೆ ಗ್ರಾ.ಪಂ. ಅಧ್ಯಕ್ಷರಾಗಿ ಜಗದೀಶ್



ಮಲೇಬೆನ್ನೂರು, ಜೂ.4- ದೇವರ ಬೆಳಕೆರೆ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಕೆ. ಹೆಚ್. ಜಗದೀಶ್ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಮತಿ ಗೀತಮ್ಮ ಪರಶುರಾಮಪ್ಪ ಅವರ ರಾಜೀನಾಮೆ ಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ರಾಮಕೃಷ್ಣ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಗ್ರಾ.ಪಂ. ಉಪಾಧ್ಯಕ್ಷ ಮಹೇಶ್ವರಪ್ಪ ಸೇರಿದಂತೆ ಗ್ರಾ.ಪಂ. ಸದಸ್ಯರು ಹಾಗೂ ಪಿಡಿಓ ಶಿವಪ್ಪ ಬಿರಾದಾರ್ ಹಾಜರಿದ್ದರು.

## ನಗರದಲ್ಲಿಂದು ಶ್ರೀ ವೆಂಕಟೇಶ್ವರ ಕಲ್ಯಾಣೋತ್ಸವ

ಎಸ್‌ಕೆಪಿ ರಸ್ತೆಯ ಶ್ರೀ ಕನ್ಯಕಾಪರಮೇಶ್ವರಿ ದೇವಿಯ ಪ್ರತಿಷ್ಠಾಪನೆಯ ಸುಸ್ಮರಣಾ ದಿನದ ಪ್ರಯುಕ್ತ ಇಂದು ಶ್ರೀ ವೆಂಕಟೇಶ್ವರ ಕಲ್ಯಾಣೋತ್ಸವ ನಡೆಯಲಿದೆ.

ಪ್ರಾತಃಕಾಲ 6 ಗಂಟೆಗೆ ಸುಪ್ರಭಾತ, ಕಾಕಡಾರತಿ, ಸಮಸ್ತ ದೇವರುಗಳಿಗೆ ಅಭ್ಯಂಗ ಸ್ನಾನ, ಉಷ್ಣೋದಕ ಸ್ನಾನ, ಪಂಚಾಮೃತ ಸುಗಂಧ ದ್ರವ್ಯ ಮಿಶ್ರ ಉದಕದಿಂದ ಅಭಿಷೇಕ ಮತ್ತು ವಿಶೇಷ ಅಭಿಷೇಕ, ಶ್ರೀದೇವಿ ಮಹಾಸೂಕ್ತ, ಮಹಾ ಅಭಿಷೇಕ, ಅಲಂಕಾರ, ಗಂಗಾ ಪೂಜೆ ಮತ್ತು ಕೀರ್ತಿಶೇಷ ಶ್ರೀ ಚನ್ನಗಿರಿ ವಿರೂಪಾಕ್ಷಪ್ಪನವರ ಹಾಗೂ ಆರ್ಯವೈಶ್ಯ ಮಹಾಜನಗಳ ಸೇವಾ, ಬೆಳಿಗ್ಗೆ 8 ಗಂಟೆಗೆ ಸೇವಾ ಕರ್ತೃಗಳಿಂದ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರಿಗೆ ಕುಂಕುಮಾರ್ಚನೆ ಮತ್ತು ವೈಶ್ಯರತ್ನ, ವೈಶ್ಯ ಧನ್ವಂತರಿ, ವೈಶ್ಯಕುಲ ತಿಲಕ ಜೆ.ಎನ್. ವೆಂಕಟಾಚಲಪತಿ ಶ್ರೇಷ್ಠಿಯವರ 70ನೇ ವರ್ಷದ ಭೀಮರಥ ಶಾಂತಿಯ ಸವಿನೆನಪಿನ ಪುದುವಟ್ಟು ಸೇವೆ ನಡೆಯುವುದು.

ಶ್ರೀ ವೆಂಕಟೇಶ್ವರ ಕಲ್ಯಾಣೋತ್ಸವ ಪೂಜಾ ಸಮಾರಂಭವು ಬೆಳಿಗ್ಗೆ 10.30 ಗಂಟೆಗೆ ನೆರವೇರುವುದು. ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ, ತೀರ್ಥಪ್ರಸಾದ ಹಾಗೂ ರಾತ್ರಿ 8 ಗಂಟೆಗೆ ಪ್ರಾಕಾರೋತ್ಸವ, ಉಯ್ಯಾಲೆ ಸೇವಾದಿಗಳು, ಮಂತ್ರಪುಷ್ಪ, ಅಷ್ಟಾವಧಾನ, ಮಹಾಮಂಗಳಾರತಿ, ಸೇವಾಕರ್ತೃಗಳ ಶ್ರೇಯಃ ಪ್ರಾರ್ಥನೆ ನಡೆಯುವುದು.

## ರೈತ ಸಂಘದ ಸಭೆ

ದಾವಣಗೆರೆ, ಜೂ.4- ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರ ಮೇಲಿನ ಆರೋಪಗಳು ನಿರಾಧಾರವಾಗಿದ್ದು, ಈ ಬಗ್ಗೆ ಚರ್ಚಿಸಲು ನಾಡಿದ್ದು ದಿನಾಂಕ 6ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಗಾಂಧಿ ನಗರದಲ್ಲಿರುವ ರೈತ ಸಂಘದ ಕಚೇರಿಯಲ್ಲಿ ರಾಜ್ಯ ಮಟ್ಟದ ಸಭೆ ಏರ್ಪಡಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಚಿನ್ನ ಸಮುದ್ರದ ಶೇಖರನಾಯ್ಕ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕಳೆದ ಮೇ 31 ರಂದು ರೈತ ಸಂಘದ ಹೆಸರಿನಲ್ಲಿ ರಾಜ್ಯ ಸಮಿತಿ ಸಭೆ ಕರೆದಿದ್ದ ಸಮಿತಿಗೂ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದ ಸಂಘಟನೆಗೂ ಸಂಬಂಧವಿಲ್ಲ ಎಂದರು.

ಮಲ್ಲಶೆಟ್ಟಿಹಳ್ಳಿ ಚೆನ್ನಬಸಪ್ಪ ಮಾತನಾಡಿದರು. ಮಹಾ ದೇವಿ ಎಸ್.ಬೇನಾಳಮಠ, ಶತಕೋಟಿ ಬಸವರಾಜಪ್ಪ, ದಾಗಿನಕಟ್ಟೆ ಬಸವರಾಜ್, ಭರಮಪ್ಪ ಮುಸ್ಟೂರು, ಹುಚ್ಚವ್ವನಹಳ್ಳಿ ಗಣೇಶ್, ಚೇತನ ಕುಮಾರ್, ಕೆ.ಬಾಬುರಾವ್, ಕರೇಕಟ್ಟೆ ಕಲೀಂವುಲ್ಲಾ, ಗಂಗನಕಟ್ಟೆ ರೇವಣ್ಣ ಪತ್ರಿಕಾಗೋಷ್ಠಿಯಲ್ಲಿದ್ದರು.


## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಕರೂರು ಗ್ರಾಮದ ರಿ.ಸರ್ವೆ ನಂಬರ್‌ಗಳಾದ 12/32 0.30 ಗುಂಟೆ ಮತ್ತು 12/31 0.30 ಗುಂಟೆ ಪ್ರದೇಶಗಳು

**1) ಶ್ರೀ ಎ.ಜಿ. ವಿಠ್ಠಲ್ ಬಿನ್ ಗಣಪತಿ ಭಟ್ ಆವಾಜಿ. 2). ಶ್ರೀ ಸತ್ಯನಾರಾಯಣ ರಾಮ್‌ರಾವ್ ರಾಯ್ಕರ್**

ಇವರು ಮೂಲ ಖಾತೆದಾರರು ಮತ್ತು ಅನುಭವದಾರರರಾಗಿದ್ದು ಈ ಹಿಂದೆ

**1) ಶ್ರೀ ವೆಲ್ಲೂರಿ ಸತ್ಯನಾರಾಯಣ ಬಿನ್ ವೆಲ್ಲೂರಿ ವೆಂಕಣ್ಣ 2) ಶ್ರೀ ವೆಲ್ಲೂರಿ ವೆಂಕಟರಾವ್ ಬಿನ್ ವೆಲ್ಲೂರಿ ಸತ್ಯನಾರಾಯಣ 3) ಶ್ರೀಮತಿ ಅಶ್ವಿನಿ ಕೋಂ ಸತೀಶ್ ಕುಮಾರ್ ಕೆ.ಎಂ. 4) ಶ್ರೀ ಡಿ. ಅಮ್ಮರಾಜ ಬಿನ್ ಲೇಟ್ ದಾನರಿ ವೆಂಕಟರಾವ್ 5) ಶ್ರೀಮತಿ ಡಿ. ಲಕ್ಷ್ಮಿಕಾಂತ್ ಕೋಂ ಡಿ. ಅಮ್ಮಿರಾಜ 6) ಶ್ರೀ ಎಜಾಸ್ ಅಹ್ಮದ್ ಬಿನ್ ಕೆ. ಎಕ್ಬಾಲ್ ಸಾಬ್**

ಈ 6 ಜನರಿಗೂ ಕೆಳಕಂಡ ಸ್ವತ್ತನ್ನು ಕೊಟ್ಟಿದ್ದು, ನಮ್ಮ ಮತ್ತು 6 ಜನರ ನಡುವೆ ಆಗಿರುವ ಒಪ್ಪಂದದ ಅಗ್ರಿಮೆಂಟ್ ಆಧಾರದ ಮೇಲೆ ನಾವು ಮತ್ತು 6 ಜನ ಸೇರಿ ಸ್ವತ್ತನ್ನು ಬೇರೆಯವರಿಗೆ ವ್ಯಾಪಾರ ಕೊಡುವುದು ಮತ್ತು ಸ್ವತ್ತಿನ ಬಾಕಿ ಕೊಡುವುದು ಸೇರಿ ಒಪ್ಪಂದದ ಅಗ್ರಿಮೆಂಟಿಗೆ 8 ಜನರ ಸಹಿ ಇರುತ್ತದೆ ಆದ್ದರಿಂದ ಸಾರ್ವಜನಿಕರು ಈ ಪ್ರಕಟಣೆಯನ್ನು ಓದುವುದು ಮತ್ತು ಖರೀದಿ ಅಗ್ರಿಮೆಂಟ್ ಮಾಡವುದಾಗಲೀ ಮಾಡಬಾರದು. ಈ 6 ಜನರು ನಮ್ಮ ಗಮನಕ್ಕೆ ತರದೇ ಮೋಸ ಮಾಡುವ ಉದ್ದೇಶದಿಂದ ಸ್ವತ್ತನ್ನು ಮಾರಾಟ ಮಾಡುವುದು ನಮ್ಮಗಳ ಗಮನಕ್ಕೆ ಬಂದುರುತ್ತದೆ. ಆದ್ದರಿಂದ ಸಾರ್ವಜನಿಕರು ಯಾರೂ ಖರೀದಿಸ ಬಾರದು ಮತ್ತು ಖರೀದಿಸಿದ್ದಲ್ಲಿ ಇದರ ಮೇಲೆ ದಾವಾ ಹೂಡಲಾಗುವುದು.

| ಸ್ವತ್ತು ನಂ. | ಡೋರ್ ನಂ. | ಅಳತೆ ಮೀಟರ್‌ಗಳಲ್ಲಿ | ಅಡಿಗಳಲ್ಲಿ |
|---|---|---|---|
| 1 | 473/12/32A | 23.70 +22.10 X 48.80 / 2 | 78+73 x 160 / 2 |
| 2 | 473/12/32B | 26.15+23.70 x 73.75 / 2 | 86+78 x 242 / 2 |
| 1 | 473/12/31A | 23.70 +22.10 X 48.80 / 2 | 78+73 x 160 / 2 |
| 2 | 473/12/31B | 26.15+23.70 x 73.75 / 2 | 86+78 x 242 / 2 |

ಈ 2 ಸ್ವತ್ತಗಳು ಒಂದಕ್ಕೊಂದು ಲಗತ್ತಾಗಿರುತ್ತವೆ. ಮತ್ತು ವಾಣಿಜ್ಯ ಮತ್ತು ವಸತಿ ವಿನ್ಯಾಸ ಹರಿಹರ-ದಾವಣಗೆರೆ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಮಹಾನಗರ ಪಾಲಿಕೆಯಿಂದ ಡೋರ್ ನಂ. ಆಗಿರುವ ಸ್ವತ್ತಾಗಿರುತ್ತದೆ. ಕಕ್ಷಿದಾರರರು **1). ಸತ್ಯನಾರಾಯಣ ರಾಮರಾವ್ ರಾಯ್ಕರ್**

**2). ಎ.ಜಿ. ವಿಠಲ್ ಬಿನ್ ಗಣಪತಿಭಟ್ ಆವಾಜಿ, ದಾವಣಗೆರೆ**


## ದಾವಣಗೆರೆ ಜಿಲ್ಲೆಗೆ ಪ್ರತ್ಯೇಕ ವಿಶ್ವಕರ್ಮ ನೂತನ ಗುರುಗಳ ನೇಮಕಕ್ಕೆ ಒಲವು



ದಾವಣಗೆರೆ, ಜೂ. 4- ಜಿಲ್ಲೆಗೆ ವಿಶ್ವಕರ್ಮ ಸಮಾಜದಿಂದ ಪ್ರತ್ಯೇಕವಾಗಿ ನೂತನ ಗುರುಗಳನ್ನು ನೇಮಕ ಮಾಡಲು ಜಿಲ್ಲಾಧ್ಯಕ್ಷ ಬಸಾಪುರದ ನಾಗೇಂದ್ರಚಾರ್, ಗೌರವಾಧ್ಯಕ್ಷ ಎನ್. ಪೂರ್ವಾಚಾರ್ ಸಮ್ಮುಖದಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಜಿಲ್ಲೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳು ವಿಶ್ವಕರ್ಮ ಜನಾಂಗದವರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಮುಂದಿನ ದಿನಗಳಲ್ಲಿ ಸಮಾಜವು ರಾಜಕೀಯವಾಗಿ ಬೆಳೆಯಲು ಮತ್ತು ಸಮಾಜವನ್ನು ಸದೃಢಗೊಳಿಸಲು ಸಮಾಜದ ಮುಖಂಡರೊಂದಿಗೆ ಸಮಾಜಕ್ಕೆ ನೇಮಕ ಮಾಡುವ ನೂತನ ಗುರುಗಳ ಪ್ರಾತಿನಿಧ್ಯವು ಸಹ ನಮ್ಮ ಸಮಾಜಕ್ಕೆ ಅವಶ್ಯಕವಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಅದರಂತೆ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಉತ್ತಮ ಗುರುಗಳ ಹುಡುಕಾಟವು ಸಮಾಜದ ಜವಾಬ್ದಾರಿಯನ್ನು ಹೆಚ್ಚಿಸಿರುತ್ತದೆ ಎಂದು ಸಭೆಯು ಒಮ್ಮತದ ತೀರ್ಮಾನ ತೆಗೆದುಕೊಂಡಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಿ. ಸಿದ್ಧಾಚಾರ್, ಪ್ರಧಾನ ಕಾರ್ಯದರ್ಶಿ ಬಿ. ವಿ. ಶಿವಾನಂದ್, ಸಂಘಟನಾ ಕಾರ್ಯದರ್ಶಿ ವಿ.ಎಂ.ಕೊಟ್ರೇಶಾಚಾರ್, ಖಜಾಂಚಿ ಬೇತೂರು ವಿಜಯಕುಮಾರ್, ನಿರ್ದೇಶಕರಾದ ಮಾವಿನಮರದ ವೀರಭದ್ರಾಚಾರ್, ಬಿ.ಪಿ. ಜಗನ್ನಾಥ್, ಹಾರ್ಮೋನಿಯಂ ಬಸವರಾಜ್, ಜಿ.ವಿ. ಬ್ರಹ್ಮಾಚಾರ್, ಎಂ.ಡಿ. ಮೌನೇಶ್ವರಚಾರ್, ಶಂಭುಲಿಂಗ ಕಮ್ಮಾರ್, ಎ.ಬಿ. ರೇಣುಕ ಮತ್ತಿತರರು ಹಾಜರಿದ್ದರು.

## ಸಪ್ತಗಿರಿ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ




ದಾವಣಗೆರೆ, ಜೂ.4- ನಗರದ ಸಪ್ತಗಿರಿ ವಿದ್ಯಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ದಂತ ವೈದ್ಯಕೀಯ ವಿಜ್ಞಾನ ಕಾಲೇಜಿನ ಅಧ್ಯಾಪಕ ಪಿ. ಸಿದ್ದೇಶ್ವರನ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಎಲ್ಲಾ ವಿದ್ಯಾರ್ಥಿಗಳು ವರ್ಷಕ್ಕೆ ಕನಿಷ್ಟ ಹತ್ತು ಗಿಡಗಳನ್ನು ನೆಡುವುದರ ಮೂಲಕ ಪರಿಸರ ರಕ್ಷಣೆ ಮಾಡಬೇಕೆಂದು ಕರೆ ನೀಡಿದರು.

ಸಹ ಶಿಕ್ಷಕರಾದ ಕುಮಾರ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಜಾಗತಿಕ ತಾಪಮಾನವನ್ನು ತಡೆಗಟ್ಟಲು ಅರಣ್ಯ ಬೆಳೆಸಿ, ಸಂರಕ್ಷಿಸಿ, ಓಝೋನ್ ಪದರವನ್ನು ರಕ್ಷಿಸಬೇಕೆಂದು ತಿಳಿ ಹೇಳಿದರು. ವಿದ್ಯಾರ್ಥಿಗಳಿಂದ ಆಕರ್ಷಕ ಸಾಲುಮರದ ತಿಮ್ಮಕ್ಕ ಮತ್ತು ಇತರೆ ಸ್ಕಿಟ್‌ಗಳನ್ನು ಹಾಗೂ ಹಾಡುಗಳನ್ನು ಪ್ರಸ್ತುತಪಡಿಸಿದರು.

ಶಾಲಾ ಆವರಣದಿಂದ ರಿಂಗ್ ರಸ್ತೆ ಮೂಲಕ ಹೊಸ ಕ್ಲಾಕ್ ಟವರ್ ವರೆಗೆ ಕಾಲ್ನಡಿಗೆಯಲ್ಲಿ ಜಾಥಾ ನಡೆಸಿ ಮಾನವ ಸರಪಳಿಯಿಂದ ಪರಿಸರ ಜಾಗೃತಿಯನ್ನು ಮೂಡಿಸಲಾ ಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ದೇವರಾಜ್, ಮುಖ್ಯೋಪಾಧ್ಯಾಯಿನಿ ಶೈಲಜಾ ರಮೇಶ್, ಸಮನ್ವಯಕಾರರಾದ ಸರ್ವಮಂಗಳ ಉಪಸ್ಥಿತರಿದ್ದರು.

## ವಿಳಂಬದ ಕಾರಣಕ್ಕೆ ಬಹುಪತ್ನಿತ್ವ ದೂರು ರದ್ದಾಗದು

(3ನೇ ಪುಟದಿಂದ) ಕೋರಿದ್ದರು. ಮದುವೆಯಾಗಿ ಸುಮಾರು 25 ವರ್ಷಗಳೇ ಆಗಿವೆ. ಮೊದಲ ಇಬ್ಬರು ಪತ್ನಿಯರ ಸಮ್ಮತಿ ಪಡೆದೇ ಮೂರನೇ ಮದುವೆಯಾಗಿದೆ ಎಂದು ವರಲಕ್ಷ್ಮಿ ಹೇಳಿದ್ದರು.

ಮೂವರು ಪತ್ನಿಯರ ನಡುವೆ ಆಸ್ತಿ ವಿವಾದ ಉಂಟಾದ ನಂತರ ಪ್ರಕರಣ ದಾಖಲಿ ಸಲಾಗಿದೆ. ಮೂರನೇ ಪತ್ನಿಗೆ ಆಸ್ತಿಯೊಂದನ್ನು ಕೊಡುಗೆಯಾಗಿ ನೀಡಿದ ಬಗ್ಗೆ ಉಳಿದ ಇಬ್ಬರಿಗೆ ಆಕ್ಷೇಪವಿದೆ. ಇದಕ್ಕಾಗಿ ದೂರು ದಾಖಲಿಸಲಾಗಿದೆ ಎಂದು ಆನಂದ್ ಹೇಳಿದ್ದರು. ಮೊದಲ ಪತ್ನಿಯ ಮಕ್ಕಳೂ ಸಹ ಆನಂದ್ ವಿರುದ್ಧ ದೂರು ದಾಖಲಿಸಿದ್ದಾರೆ.

ಆನಂದ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ, ಆನಂದ್ ಹಾಗೂ ಮೂರನೇ ಪತ್ನಿ ವಿರುದ್ಧದ ಪ್ರಕರಣ ಕೈ ಬಿಡಲಾಗದು ಎಂದು ಹೇಳಿದ್ದರು. ಆದರೆ, ಬಹುಪತ್ನಿತ್ವಕ್ಕೆ ಕುಮ್ಮಕ್ಕು ನೀಡಿದ ಆರೋಪದಿಂದ ಅವರ ಸ್ನೇಹಿತರನ್ನು ಮುಕ್ತಗೊಳಿಸಿದ್ದರು.

ಬಹುಪತ್ನಿತ್ವ ಪ್ರಕರಣಗಳಲ್ಲಿ ಸಾಮಾನ್ಯ ವಾಗಿ ಗಂಡ ಹಾಗೂ ಇಬ್ಬರು ಪತ್ನಿಯರು ಭಾಗಿಯಾಗಿರುತ್ತಾರೆ. ಆದರೆ, ಈ ಪ್ರಕರಣದಲ್ಲಿ ನಾಲ್ವರು ಭಾಗಿಯಾಗಿದ್ದಾರೆ. ಈ ವಿಷಯವನ್ನು ನಾಲ್ವರೇ ಬಗೆಹರಿಸಿಕೊಳ್ಳಬೇಕು. ಇದರಲ್ಲಿ ಉಳಿದವರ ಪಾತ್ರವಿಲ್ಲ ಎಂದು ಹೈಕೋರ್ಟ್ ಹೇಳಿದೆ.

## ಮೌಂಟ್ ಎವರೆಸ್ಟ್ ಏರಿದ ಹೆಮ್ಮೆಯ ಕನ್ನಡಿಗ



ದಾವಣಗೆರೆ, ಜೂ.4- ನಗರದ ಬ್ಯಾಡಗಿ ಗಂಗಾಧರಪ್ಪ ಮತ್ತು ಶ್ರೀಮತಿ ಗೌರಮ್ಮ ಅವರ ಮಗಳಾದ ಶ್ರೀಮತಿ ಶಾಂತ ರವಿಶಂಕರ್ ಇವರ ಅಳಿಯ ಬೆಂಗಳೂರಿನ ಸುನೀಲ್ ನಟರಾಜ್ ಅವರು ವಿಶ್ವದ ಅತ್ಯಂತ ಎತ್ತರದ ಶಿಖರವಾದ ಮೌಂಟ್ ಎವರೆಸ್ಟ್ ಏರಿ ನಮ್ಮ ರಾಷ್ಟ್ರಧ್ವಜವನ್ನು ಹಾರಿಸಿದ ಕರ್ನಾಟಕದ ಮೊಟ್ಟಮೊದಲ ಹೆಮ್ಮೆಯ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.




**ನಾಯಿಗಳು ಕಳೆದಿವೆ**

ಈ ಚಿತ್ರದಲ್ಲಿರುವ ನಾಯಿಗಳು ಕಳೆದಿರುತ್ತವೆ. ಯಾರಿಗಾದರು ಸಿಕ್ಕರೆ ದಯವಿಟ್ಟು ಈ ಕೆಳಗಿನ ಫೋನ್ ನಂಬರ್‌ಗೆ ತಿಳಿಸಿದರೆ ಸೂಕ್ತ ಬಹುಮಾನ ಕೊಡಲಾಗುವುದು.

**94494 54688, 94815 65094**

Sushrutha Arogya Pratishtana's
**SUSHRUTHA INSTITUTE OF PHARAMACY-**
Pamenahalli Road, Davanagere-577002

**ಬೇಕಾಗಿದ್ದಾರೆ**

ಟೆಲಿಮಾರ್ಕೆಟಿಂಗ್ / ವಿದ್ಯಾರ್ಥಿ ತರಬೇತುದಾರ / PRO ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC / ಯಾವುದೇ ಪದವಿ. ವಯೋಮಿತಿ -25 ವರ್ಷದ ಒಳಗಡೆ.
ಅಭ್ಯರ್ಥಿಗಳು ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಕೌಶಲ್ಯ ಹೊಂದಿರಬೇಕು.
ವೇತನ : ಅನುಭವಿ ಅಭ್ಯರ್ಥಿಗಳಿಗೆ ವೇತನದ ನಿಬಂಧನೆ ಇರುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಹಾಗೂ ಸಂದರ್ಶನಕ್ಕೆ ಹಾಜರಾಗಲು
ಸಂಪರ್ಕಿಸಿ : 81471 39924

**ಷೇರು ಮಾರುಕಟ್ಟೆಯ ಬಗ್ಗೆ ಉಚಿತ ಕಾರ್ಯಾಗಾರ ಹಾಗೂ ತರಬೇತಿ**

1. ಡಿಮ್ಯಾಟ್ ಖಾತೆಯ ನಿರ್ವಹಣೆ ಬಗ್ಗೆ ಹಾಗೂ ಈಕ್ವಿಟಿ ಮಾರುಕಟ್ಟೆಯಲ್ಲಿ ಹೇಗೆ ಅಧಿಕ ಲಾಭ ಗಳಿಸುವುದು.
2. ಉತ್ತಮ ಕಂಪನಿಗಳ ಷೇರುಗಳ ಆಯ್ಕೆಯನ್ನು ಹೇಗೆ ಮಾಡುವುದು.
3. ಡೇ ಟ್ರೇಡಿಂಗ್‌ನಲ್ಲಿ ಲಾಭ ಗಳಿಸುವುದು ಹೇಗೆ? ಫಂಡಮೆಂಟಲ್ ಮತ್ತು ಟೆಕ್ನಿಕಲ್ ಅನಲೈಸ್ ಮಾಡುವುದು.
4. ಫ್ಯೂಚರ್ ಮತ್ತು ಆಪ್ಷನ್ಸ್ ಸೆಗ್‌ಮೆಂಟ್‌ಗಳಲ್ಲಿ ಟ್ರೇಡಿಂಗ್ ಮಾಡುವುದು.
5. ಇ.ಟಿ. ಎಫ್‌ಗಳಲ್ಲಿ ಅಧಿಕ ಲಾಭ ಗಳಿಸುವುದು.
6. ಪೋರ್ಟ್‌ಫೋಲಿಯೋ ಮ್ಯಾನೇಜ್‌ಮೆಂಟ್ ಹಾಗೂ ಮನಿ ಮೇನೇಜ್‌ಮೆಂಟ್ ಹಾಗು ಮಾಹಿತಿ. (ಹೊಸದಾಗಿ ಡಿಮ್ಯಾಟ್ ಖಾತೆ ತೆರೆಯುವುದು ಹಾಗೂ ಷೇರು ಮಾರುಕಟ್ಟೆಯ ಬಗ್ಗೆ ತಿಳಿದುಕೊಳ್ಳಲು ಆಸಕ್ತಿ ಮತ್ತು ಷೇರು ಮಾರುಕಟ್ಟೆಗೆ.)

(ಪ್ರವೇಶ ಮಾಡುವವರು ಉಚಿತ 15 ದಿನಗಳ ತರಬೇತಿ ಹಾಗೂ ಕಾರ್ಯಾಗಾರಕ್ಕೆ ನೋಂದಾಯಿಸಿಕೊಳ್ಳಿ)

ಸ್ಥಳ : ದಾವಣಗೆರೆ ಒನ್ ಹತ್ತಿರ, ಎಂ.ಸಿ.ಸಿ 'ಎ' ಬ್ಲಾಕ್ ದಾವಣಗೆರೆ.
ಮೊ : 96636 56999, 93801 70045



**ಹುಟ್ಟುಹಬ್ಬದ ಶುಭಾಶಯಗಳು**

ದಿನಾಂಕ 5.06.2022ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಪ್ರಥಮ ವರ್ಷದ ದಂತ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ

**ಕು. ಜೆ. ಹೇಮರಾಣಿ**

ಅವರಿಗೆ ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು:
**ಎ. ನಾಗರಾಜ್**, ಸದಸ್ಯರು, ಮ.ನ. ಪಾಲಿಕೆ, ದಾವಣಗೆರೆ.
**ಶ್ರೀಮತಿ ರೇಖಾ ನಾಗರಾಜ್**, ಮಾಜಿ ಮೇಯರ್, ಮ.ನ. ಪಾಲಿಕೆ, ದಾವಣಗೆರೆ.
ತಂದೆ: **ಎಸ್. ಜಯಣ್ಣ**, ವಕೀಲರು ತಾಯಿ: **ಶ್ರೀಮತಿ ಶಾಂತಲಾ**
ಅಕ್ಕ: **ಕು. ಜೆ. ಲೀಲಾಪಲ್ಲವಿ, ಶಿವರುದ್ರಪ್ಪ, ಎಂ. ಮಂಜುಳ,**
**ಎಂ. ಸುಗಂಧನಿಪುಷ್ಪಜಯಪ್ಪ, ಎಂ. ಲತಾಂಗಿ ಉಮಾಶಾಂತರಾಜ್,**
**ಶ್ರೀಮತಿ ಮಂಜುಳ ಸತೀಶ್‌ಕುಮಾರ್**
**ಯಶಸ್, ವಿಶ್ವಾಸ್, ವರ್ಣಿಕ, ಗಹನ**

# ಅಹಂಕಾರ ಬಿಟ್ಟು ಸ್ವಾಭಿಮಾನಿಯಾದರೆ ಯಶಸ್ಸು

## ಬಾಪೂಜಿ ಬಿ-ಸ್ಕೂಲ್ಸ್‌ನ ಪದವಿ ದಿನಾಚರಣೆಯಲ್ಲಿ ನಿವೇದನ್ ನಿಂಪೆ



ದಾವಣಗೆರೆ, ಜೂ. 4 – ಅಹಂಕಾರ ಮುನ್ನಡೆಯ ಹಾದಿಗೆ ಅಡ್ಡಿ ತರುತ್ತದೆ. ಸ್ವಾಭಿಮಾನ ಯಶಸ್ಸಿನ ಹಾದಿ ತೋರಿಸುತ್ತದೆ ಎಂದು ಮಿಸ್ಟಿಕ್ ಅರೋಮೆಟಿಕ್ಸ್ ಕಂಪನಿಯ ಸಿ.ಇ.ಒ. ನಿವೇದನ್ ನಿಂಪೆ ಹೇಳಿದ್ದಾರೆ.

ನಗರದ ಬಾಪೂಜಿ ಎಂ.ಬಿ.ಎ. ಕಾಲೇಜಿನಲ್ಲಿ ಇಂದು ಏರ್ಪಾಡಾಗಿದ್ದ 2019-22ನೇ ಸಾಲಿನ ಎಂ.ಬಿ.ಎ. ವಿದ್ಯಾರ್ಥಿಗಳ ಪದವಿ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಈ ದಿನ ವಿದ್ಯಾರ್ಥಿಗಳಿಗೆ ಪದವಿ ಹಾಗೂ ಪದವಿ ಪಡೆದ ಅಹಂಕಾರ ಎರಡೂ ದೊರೆತಿದೆ. ಆದರೆ, ಪದವಿಯಿಂದ ಪಡೆದ ಜ್ಞಾನವನ್ನು ಅಹಂಕಾರ ನಾಶಗೊಳಿಸುತ್ತದೆ. ಅಹಂಕಾರ ಹೊಂದಿದ ಪದವೀಧರ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ ಎಂದರು.

ಎಂ.ಬಿ.ಎ. ಪದವಿ ಇದೆ ಎಂಬ ಕಾರಣಕ್ಕಾಗಿ ಇಂತಹ ಕೆಲಸವೇ ಬೇಕು ಎಂಬ ಸಂಕುಚಿತ ಮನೋಭಾವ ಹೊಂದಬಾರದು. ಕಡಿಮೆ ಓದಿಯೂ ಮಹತ್ತರ ಸಾಧನೆ ಮಾಡಿದವರು ಉದ್ಯಮದಲ್ಲಿದ್ದಾರೆ ಎಂದರು.

ಅಹಂಕಾರ ಕೈ ಬಿಟ್ಟು ಸ್ವಾಭಿಮಾನ ಬೆಳೆಸಿಕೊಳ್ಳಬೇಕು. ಸ್ವಾಭಿಮಾನಿ ವ್ಯಕ್ತಿಗಳು ಬೇರೆಯವರೊಂದಿಗೆ ಸುಲಭವಾಗಿ ಬೆರೆಯುತ್ತಾರೆ, ಬೇರೆಯವರಿಂದ ಕಲಿತು ಬೆಳೆಯುತ್ತಾರೆ ಎಂದು ಹೇಳಿದರು.

ವೃತ್ತಿ ಜೀವನದಲ್ಲಿ ಎಂದೂ ವೈಫಲ್ಯಗಳು ಇರುವುದಿಲ್ಲ, ಕೇವಲ ತಪ್ಪುಗಳಿರುತ್ತವೆ. ತಪ್ಪುಗಳೆಂದರೆ ಕಲಿಕೆಯ ಮೊದಲ ಪ್ರಯತ್ನ ಎಂದು ನಿಂಪೆ ವಿಶ್ಲೇಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದಿರುವ ನಗರದ ಅವಿನಾಶ್ ರಾವ್, ಮುಂದಿನ ದಿನಗಳು ಅಧಿಕಾರಶಾಹಿಗಳ ಕೈಯಲ್ಲಿಲ್ಲ. ಭವಿಷ್ಯದ ದಿನಗಳು ಉದ್ಯಮಶೀಲರ ಕೈಯಲ್ಲಿವೆ. ಉದ್ಯಮಶೀಲರಾಗಲಿರುವ ಎಂ.ಬಿ.ಎ. ಪದವೀಧರರು ಸೇವಾ ಮನೋಭಾವ ಹೊಂದಿರಬೇಕು ಎಂದರು.

ನಾಯಕತ್ವ ಹಾಗೂ ನಿರ್ವಹಣೆಯ ನಡುವೆ ಸಾಕಷ್ಟು ವ್ಯತ್ಯಾಸವಿದೆ. ನಾಯಕತ್ವ ಎಂಬುದು ನಿರ್ವಹಣೆಗಿಂತ ಉತ್ತಮವಾದದ್ದು. ನಾಯಕತ್ವದಲ್ಲಿರುವವರಿಗೆ ದೂರದೃಷ್ಟಿ ಹಾಗೂ ಸಮಾಜದ ಸಮಸ್ಯೆಗಳನ್ನು ಬಗೆಹರಿಸುವ ಗುಣ ಇರುತ್ತದೆ ಎಂದವರು ಹೇಳಿದರು.

ಮಾಜಿ ವಿದೇಶಾಂಗ ಸಚಿವರಾದ ಸುಷ್ಮಾ ಸ್ವರಾಜ್ ಅವರು ಅನಾರೋಗ್ಯದ ನಡುವೆಯೂ ವಿದೇಶಾಂಗ ಸಚಿವಾಲಯವನ್ನು ದಕ್ಷವಾಗಿ ನಿಭಾಯಿಸಿ ಆದರ್ಶವಾಗಿದ್ದಾರೆ. ಅವರ ಸೇವೆ ನನಗೆ ಸ್ಫೂರ್ತಿಯಾಗಿತ್ತು ಎಂದು ಅವಿನಾಶ್ ತಿಳಿಸಿದರು.

ಬಾಪೂಜಿ ಬಿ - ಸ್ಕೂಲ್ಸ್ ನಿರ್ದೇಶಕ ಡಾ. ಹೆಚ್.ವಿ. ಸ್ವಾಮಿ ತ್ರಿಭುವಾನಂದ ಅವರು ಪದವಿ ಪ್ರಮಾಣ ವಚನ ಬೋಧಿಸಿದರು.

ಬಾಪೂಜಿ ಬಿ - ಸ್ಕೂಲ್ಸ್ ಅಧ್ಯಕ್ಷ ಅಥಣಿ ಎಸ್. ವೀರಣ್ಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಬಿ - ಸ್ಕೂಲ್ಸ್ ಪ್ರಾಂಶುಪಾಲ ನವೀನ್, ಸಮಾರಂಭದ ಸಂಚಾಲಕ ಕೆ.ಎಸ್. ವಿಜಯ್ ಮತ್ತಿತರರು ಉಪಸ್ಥಿತರಿದ್ದರು.

## ಪಠ್ಯಪುಸ್ತಕಕ್ಕೆ ಹೊಸ ಸಮಿತಿ ಇಲ್ಲ : ಸಿಎಂ

ಚಿತ್ರದುರ್ಗ, ಜೂ. 4 - ಈಗಿರುವ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ವಿಸರ್ಜನೆಯಾದ ನಂತರ ಹೊಸ ಸಮಿತಿ ರೂಪಿಸುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ತೀವ್ರ ವಿವಾದಕ್ಕೆ ಗುರಿಯಾಗಿತ್ತು. ಸಮಿತಿಯನ್ನು ವಿಸರ್ಜಿಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದರು.

ಚಿತ್ರದುರ್ಗದ ಹಿರಿಯೂರಿನ ದೇವರಕೊಟ್ಟದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಬೊಮ್ಮಾಯಿ, ಹೊಸ ಸಮಿತಿ ರಚಿಸುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ.

## ಒಂದು ಬಾರಿ ಬಳಕೆಯ ಪ್ಲಾಸ್ಟಿಕ್ ನಿಷೇಧಕ್ಕಾಗಿ ಕೇಂದ್ರದ ಸೂಚನೆ

ನವದೆಹಲಿ, ಜೂ. 4 – ಒಂದು ಬಾರಿ ಮಾತ್ರ ಬಳಕೆ ಮಾಡಬಹುದಾದ ಪ್ಲಾಸ್ಟಿಕ್ ಬಳಕೆ ನಿಲ್ಲಿಸುವ ಸಲುವಾಗಿ ರಾಜ್ಯಗಳಿಗೆ ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. 4,704 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 2,591 ಈಗಾಲೇ ಒಂದು ಬಾರಿ ಬಳಕೆ ಪ್ಲಾಸ್ಟಿಕ್ ನಿಷೇಧಿಸುವ ಆದೇಶ ಹೊರಡಿಸಿವೆ. ಉಳಿದ 2,100ರಷ್ಟು ನಗರ ಸ್ಥಳೀಯ ಸಂಸ್ಥೆಗಳೂ ಜೂನ್ 30, 2022ರ ಒಳಗೆ ಈ ಬಗ್ಗೆ ಆದೇಶ ಹೊರಡಿಸಬೇಕಿದೆ.

ದೊಡ್ಡ ಪ್ರಮಾಣದಲ್ಲಿ ಸ್ವಚ್ಛತಾ ಕಾರ್ಯ ಹಾಗೂ ಒಂದು ಬಾರಿ ಬಳಕೆಯ ಪ್ಲಾಸ್ಟಿಕ್ ನಿಷೇಧ ಕುರಿತ ಅಭಿಯಾನ ನಡೆಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

## ಯುಪಿಎಸ್‌ಸಿ ಕರ್ನಾಟಕ ಟಾಪರ್‌ಗೆ ಎಸ್ಸೆಸ್ ಅಭಿನಂದನೆ



ದಾವಣಗೆರೆ, ಜೂ. 4 - ಯುಪಿಎಸ್‌ಸಿ ಪರೀಕ್ಷೆಯಲ್ಲಿ 31ನೇ ರ‍್ಯಾಂಕ್ ಪಡೆಯುವ ಮೂಲಕ ಕರ್ನಾಟಕ ರಾಜ್ಯದ ಟಾಪರ್ ಆಗಿರುವ ಜನತಾ ಹೋಟೆಲ್ ಗ್ರೂಪ್‌ನ ಮಾಲೀಕರಾದ ಆನಂದರಾವ್ ಅವರ ಮೊಮ್ಮಗ ಅವಿನಾಶ್ ಅವರನ್ನು ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಇಂದು ಅಭಿನಂದಿಸಿದರು. ಅವಿನಾಶ್ ಅವರನ್ನು ಅಭಿನಂದಿಸಿದ ಎಸ್ಸೆಸ್, ಆನಂದರಾವ್ ಅವರೊಂದಿಗಿನ ಹಿಂದಿನ ದಿನಗಳನ್ನು ಮೆಲುಕು ಹಾಕಿದರು. ಈ ಸಂದರ್ಭದಲ್ಲಿ ಅವಿನಾಶ್ ಅವರ ತಂದೆ ವಿಠ್ಠಲರಾವ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಸದಸ್ಯ ಎ.ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ್

ನಗರಾಭಿವೃದ್ದಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 9.30 ಕ್ಕೆ ಪ್ರವಾಸಿ ಮಂದಿರಕ್ಕೆ ಆಗಮಿಸುವ ಸಚಿವರು, ಬೆಳಿಗ್ಗೆ 11 ಗಂಟೆಗೆ ದೇವರಾಜ ಅರಸು ಬಡಾವಣೆಯಲ್ಲಿ ಜರುಗುವ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸುವರು.

ನಂತರ ಬೆಳಿಗ್ಗೆ 11.45 ರಿಂದ 1.30 ಗಂಟೆಯವರೆಗೆ ಹೊನ್ನಾಳಿ ತಾಲ್ಲೂಕಿನ ಬೆನಕನಹಳ್ಳಿ ಹಾಗೂ ಸಾಸ್ವೆಹಳ್ಳಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

## ಕೆನರಾ ಬ್ಯಾಂಕ್‌ನಿಂದ ಕೌಶಲ್ಯ ತರಬೇತಿ

ದಾವಣಗೆರೆ, ಜೂ.4- ಹಳೇ ತೋಳಹುಣಸೆಯಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ 18 ರಿಂದ 45 ವರ್ಷ ವಯಸ್ಸಿನ ಗ್ರಾಮೀಣ ಮಟ್ಟದ ಯುವಕ/ಯುವತಿಯರಿಗಾಗಿ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಇದೇ ದಿನಾಂಕ 22ರಂದು ಹಮ್ಮಿಕೊಳ್ಳಲಾಗಿದೆ.

ಮಹಿಳೆಯರಿಗಾಗಿ 30 ದಿನಗಳ ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ, ಮಹಿಳೆ ಮತ್ತು ಪುರುಷರಿಗಾಗಿ 30 ದಿನಗಳ ಫೋಟೋಗ್ರಫಿ ಮತ್ತು ವೀಡಿಯೋಗ್ರಫಿ ಉಚಿತ ತರಬೇತಿ ನೀಡಲಾಗುವುದು. ಅಲ್ಲದೇ ಆಸಕ್ತ ನಿರುದ್ಯೋಗಿ ಅಭ್ಯರ್ಥಿಗಳು ಸ್ವ-ಉದ್ಯೋಗ ಮಾಡಲು ಇಚ್ಛಿಸುವವರು ಹೆಸರನ್ನು ನೋಂದಾಯಿಸಬಹುದು. ಹೆಚ್ಚಿನ ಮಾಹಿತಿಗೆ, ಕೆನರಾ ಬ್ಯಾಂಕ್ ತೋಳಹುಣಸೆ, ದೂ.ಸಂಖ್ಯೆ: 7975139332, 7019980484, 9964111314, 9538395817, 9481977076 ಸಂಪರ್ಕಿಸಬಹುದು.

## ಕೊಮಾರನಹಳ್ಳಿ : ಆರೋಗ್ಯ ಶಿಬಿರ

ಮಲೇಬೆನ್ನೂರು : ನಂದಿಗಾವಿ ಶ್ರೀನಿವಾಸ್ ಯುವ ಬ್ರಿಗೇಡ್ ವತಿಯಿಂದ ಕೊಮಾರನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಇಂದು ಬೆಳಿಗ್ಗೆ 10.30 ರಿಂದ ಉಚಿತ ನೇತ್ರ ತಪಾಸಣೆ ಶಿಬಿರ ಮತ್ತು ಬಿ.ಪಿ., ಶುಗರ್ ಟೆಸ್ಟ್ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಹರಳಹಳ್ಳಿ ಮಂಜು ತಿಳಿಸಿದ್ದಾರೆ.

## ಇಂದು ಹೊನ್ನಾಳಿ ತಾಲ್ಲೂಕು ಪಂಚಮಸಾಲಿ ಸಮಾಜದ ಸಭೆ

ಹೊನ್ನಾಳಿ ತಾಲ್ಲೂಕು ಪಂಚಮಸಾಲಿ ಸಮಾಜದ ಸಭೆ ಇಂದು ಮಧ್ಯಾಹ್ನ 3 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆಯಲಿದೆ ಎಂದು ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಪಟ್ಟಣಶೆಟ್ಟಿ ವೀರಣ್ಣ ತಿಳಿಸಿದ್ದಾರೆ.


ಹಾರ್ದಿಕ ಅಭಿನಂದನೆಗಳು

ಶ್ರೀಮತಿ ಮಹಾಲಕ್ಷ್ಮಿ ಚಂದ್ರಶೇಖರ್‌ರವರ ಪುತ್ರರಾದ ರಿಪ್ಪನ್‌ಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಶ್ರೀ ರಾಕೇಶ್ ಸಿ. ರವರು ಮಂಡಿಸಿದ "ಮೋಟಿವೇಷನಲ್ ಪಾಲಿಸಿಜ್ & ಪ್ರಾಕ್ಟೀಸಿಸ್ ಇನ್ ಎಂಎನ್ ಸಿಸ್-ಎ ಕೇಸ್ ಸ್ಟಡಿ ಆಫ್ ಸೆಲೆಕ್ಟೆಡ್ ಎಂಎನ್ಸಿಸ್ ಇನ್ ಕರ್ನಾಟಕ" ಎಂಬ ವಿಷಯದ ಮೇಲಿನ ಮಹಾ ಪ್ರಬಂಧಕ್ಕೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ, ಗೌರವಿಸಿದೆ.







ಶುಭ ಕೋರುವವರು :


ಶ್ರೀಮತಿ ನಿರ್ಮಲ ಬಿ.ಎಸ್. ದತ್ತಾತ್ರೇಯ ಶ್ರೇಷ್ಠಿ

ಭರಮಸಾಗರದ ದಿ|| ಗೋವಿಂದಪ್ಪ ಶ್ರೇಷ್ಠಿ ಕುಟುಂಬ ವರ್ಗದವರು

ಶ್ರೀ ಗೋವಿಂದ ಶೆಟ್ರು, ಭರಮಸಾಗರ.



ವಿಶ್ವಪರಿಸರ ದಿನಾಚರಣೆಯ ಆನ್‌ಲೈನ್ ಕ್ವಿಝ್ ಸ್ಪರ್ಧೆ




ONLINE QUIZ ನಲ್ಲಿ ಭಾಗವಹಿಸಿ ಮತ್ತು ಬಹುಮಾನ ಗೆಲ್ಲಿರಿ

ಜೂನ್ 5 ರಂದು, ಬೆಳಗ್ಗೆ 7.00 ಗಂಟೆಗೆ ಪ್ರಾರಂಭ

ಲಿಂಕ್ :https://rhr.group/quiz

T&C Apply

ಆರ್. ಹೆಚ್. ರಾಧಾಕೃಷ್ಣ ಗುಪ್ತ ಜ್ಯೂಯಲರ್ಸ್

#17&5/2 Vijayalakshmi Road, Davangere- 577001 | : 6366531112-1113-1116-1117-1118 | : info@rhrjewellers.com

:85508 33300 :63665 81119 | :www.rhrjewellers.com Valet parking available.



ffreedom Get Wise, Break Free

ಮನೆಯಿಂದಲೇ ಕೆಲಸ

ಭಾರತದ ಅತಿದೊಡ್ಡ ಫೈನಾನ್ಸಿಯಲ್ ಎಜುಕೇಶನ್ ಸಂಸ್ಥೆಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕೆಲಸ-ರಿಲೇಷನ್ ಶಿಪ್ ಮ್ಯಾನೇಜರ್

ವಿದ್ಯಾರ್ಹತೆ – ಎಸ್.ಎಸ್.ಎಲ್.ಸಿ. ಮೇಲ್ಪಟ್ಟು

ಸಂಬಳ – 15K ಯಿಂದ 50K (Incentive)

ಖಾಯಂ ಹುದ್ದೆ.

ಸಂಪರ್ಕಿಸಿ: 78923 89065



JANATHA VIDYALAYA ENGLISH MEDIUM SCHOOL

Hondada Road, Davangere.

Contact : 9620717196, 9108756914, 9844664231

TEACHER'S REQUIRED

Proficiency in Spoken and Written English is a Pre-Requisite for all Position

| CLASS | SUBJECTS | VACANCIES |
|---|---|---|
| Kinder Garten (LKG, UKG) | English | 02 |
| Lower Primary | English | 02 |
| I to V | Mathematics | 02 |
| High School | Science | 02 |
| VIII to SSLC | Mathematics | 02 |



ಸುವರ್ಣ ದಾಂಪತ್ಯ ಸಂಭ್ರಮ ಹಾರ್ದಿಕ ಶುಭಾಶಯಗಳು



ಇಂದು ತಮ್ಮ 50ನೇ ವರ್ಷದ ಸುವರ್ಣ ವಿವಾಹ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ನಮ್ಮ ಪೂಜ್ಯ ತಂದೆ-ತಾಯಿ ಶ್ರೀ ಆರ್.ಎಸ್. ಸಿಂಗ್ ಮತ್ತು ಶ್ರೀಮತಿ ಮಾಲತಿ ಸಿನ್ಹಾ ಅವರುಗಳಿಗೆ ಹಾರ್ದಿಕ ಶುಭಾಶಯಗಳು.

ಈ ದಾಂಪತ್ಯಕ್ಕೆ ಇಂಥ ಸಂಭ್ರಮಗಳು ನೂರಾಗಲಿ ಎಂದು ಹಾರೈಸುತ್ತೇವೆ.

* ಉದಯಕುಮಾರ್ ಸಿಂಗ್
* ಡಾ|| ಜಿನಯ್‌ಕುಮಾರ್ ಸಿಂಗ್
* ಡಾ|| ನಿರ್ಮಲ ಹರೀಶ್



ಮೌಂಟ್ ಎವರೆಸ್ಟ್ ಏರಿದ ಹೆಮ್ಮೆಯ ಕನ್ನಡಿಗನಿಗೆ ಹಾರ್ದಿಕ ಅಭಿನಂದನೆಗಳು



ದಾವಣಗೆರೆ ನಗರ ವಾಸಿ ಶ್ರೀ ಬ್ಯಾಡಗಿ ಗಂಗಾಧರಪ್ಪ ಮತ್ತು ಶ್ರೀಮತಿ ಗೌರಮ್ಮ ಅವರ ಮಗಳಾದ ಶ್ರೀಮತಿ ಶಾಂತ ರವಿಶಂಕರ್ ಇವರ ಅಳಿಯ ಬೆಂಗಳೂರಿನ

ಶ್ರೀ ಸುನೀಲ್ ನಟರಾಜ್

ಇವರು ವಿಶ್ವದ ಅತ್ಯಂತ ಎತ್ತರದ ಶಿಖರವಾದ ಮೌಂಟ್ ಎವರೆಸ್ಟ್ ಏರಿ ನಮ್ಮ ರಾಷ್ಟ್ರಧ್ವಜವನ್ನು ಹಾರಿಸಿದ ಕರ್ನಾಟಕದ ಮೊಟ್ಟ ಮೊದಲ ಹೆಮ್ಮೆಯ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಶುಭ ಸಂದರ್ಭದಲ್ಲಿ ಸುನೀಲ್ ನಟರಾಜ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಬ್ಯಾಡಗಿ ವಂಶಸ್ಥರು, ದಾವಣಗೆರೆ.



AAM AADMI PARTY

ಅಮ್ ಆದ್ಮಿ ಪಾರ್ಟಿ (ಎಎಪಿ) ದಾವಣಗೆರೆ ಜಿಲ್ಲಾ ಘಟಕ

AAM AADMI PARTY (AAP) DAVANGERE DISTRICT



ಅರವಿಂದ ಕ್ರೇಜಿವಾಲ್ ರಾಷ್ಟ್ರಾಧ್ಯಕ್ಷರು | ಪೃಥ್ವಿ ರೆಡ್ಡಿ ರಾಜ್ಯಾಧ್ಯಕ್ಷರು | ರಾಘವೇಂದ್ರ ಕೆ.ಎಲ್. ಜಿಲ್ಲಾಧ್ಯಕ್ಷರು, ದಾವಣಗೆರೆ.



ದಾವಣಗೆರೆ ಜಿಲ್ಲೆಯ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾಗಿ ಆಯ್ಕೆಯಾದ

ಶ್ರೀ ಸಿದ್ದೇಶ್ ಚಂದ್ರರವರಿಗೆ

ಹಾರ್ದಿಕ ಶುಭಾಶಯಗಳು

ಶುಭ ಕೋರುವವರು :

ಬಂಧು-ಮಿತ್ರರು ಹಾಗೂ ಆಮ್ ಆದ್ಮಿ ಪಾರ್ಟಿಯ ಜಿಲ್ಲಾ ಕಾರ್ಯಕರ್ತರು ಮತ್ತು ತಾಲ್ಲೂಕು ಕಾರ್ಯಕರ್ತರು


**JANATHAVANI -** Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte